# ಶ್ರೀ ಶ್ರೀ ಶ್ರೀ ಕೃಷ್ಣಯೋಗೀಂದ್ರ ಸರಸ್ವತೀ ಪರಮಹಂಸರ ಸಂಕ್ಷಿಪ್ತ ಪರಿಚಯ

ಅರುಣಚರಣಪದ್ಮಂ ಪಂಡಿತೈಃ ಸೇವ್ಯಮಾನಮ್ ।
ನರಹರಿಗುರುರೂಪಂ ನಿತ್ಯವಿಜ್ಞಾನವೇದ್ಯಮ್ ।
ಅಮರಗಿರಿನಿವಾಸಶ್ರೀನಿವಾಸಪ್ರಸಾದಾತ್ ।
ಪ್ರಕಟಿತನಿಜಚಿತ್ತಂ ಶ್ರೀಕೃಷ್ಣಯೋಗೀಂದ್ರಮೀಡೇ ॥

ಯಳ್ಳಂಬಳಸೆ ಎಂಬುದು ಕಡೂರು ತಾಲ್ಲೂಕಿಗೆ ಸೇರಿರುವ ಒಂದು ಅಗ್ರಹಾರ, ಹಳ್ಳಿ. ಆಗ್ಗೆ ಹಳ್ಳಿಗಳು ಈಗಿನ ಕಾಲಕ್ಕಿಂತ ಹೆಚ್ಚಿನ ಕಳೆಯೇರಿದ್ದವು. ಕಡೂರಿಗೆ ಎಂಟು-ಹತ್ತು ಮೈಲಿಗಳ ದೂರದಲ್ಲಿ ಯಾವ ರಸ್ತೆಯ ಸಂಬಂಧವೂ ಇಲ್ಲದ ಆ ಊರು ಆಗ್ಗೆ ಒಂದು ಮಾದರಿಯ ಹಳ್ಳಿಯಾಗಿತ್ತೆಂದರೆ ತಪ್ಪಾಗದು. ಊರ ಹೆಬ್ಬಾಗಿಲಿನಾಚೆಗೆ, ದೊಡ್ಡ, ನೀರಿನ ಕಟ್ಟೆ, ನೀರಿನ ಬಾವಿ, ಎರಡು-ಮೂರು ಅರಳಿಯ ಮರಗಳು, ಅವುಗಳಾಚೆ ಹನುಮರಾಯನ ಗುಡಿ, ಅದರಾಚೆಗೆ ಒಂದು ಕೆರೆ, ಕೆರೆಯ ಹಿಂದೆ ತೋಟ-ಗದ್ದೆಗಳು, -- ಇದು ಊರ ಹೊರಗಿನ ಚಿತ್ರ.

ಊರೊಳಗೆ ಚಾವಡಿ. ಕೆಲವು ಬ್ರಾಹ್ಮಣರ ಮನೆಯ ಜೊತೆಗೆ ಗೌರವಾರ್ಹರಾದ ನಾಡಿಗರ, ಅಯ್ಯನವರ ವಂಶದ ಮನೆಗಳು, ಬಸವನಗುಡಿ, ಸೋಮೇಶ್ವರಗುಡಿ, ಬೀರದೇವರಗುಡಿ, ಹೊನ್ನಾಲದಮ್ಮನ ಗುಡಿ, ಚೆನ್ನಕೇಶವ ದೇವಾಲಯ, ಕುರುಬರು, ಕುಂಬಾರರು, ಅಕ್ಕಸಾಲಿಗರು, ವೀರ

ಶೈವರು ಮೊದಲಾದವರ ಕೇರಿಗಳೂ ಇದ್ದವು. ‘ವೇದಾವತಿ’ ಎಂಬ ತೊರೆಯ ದಂಡೆಯ ಮೇಲೆ ಹಳ್ಳದಮ್ಮನ ಗುಡಿಯಿತ್ತು. ಗ್ರಾಮದ ಕೆಂಡವನ್ನು ತುಳಿಯುವ ಉತ್ಸವವಾಗಲಿ, ಬೀರದೇವರ ಗುಡಿಯ ಬಾಳೆಯ ಪಟ್ಟೆಯ ಮಂಟಪವಾಗಲಿ, ಚೆನ್ನಕೇಶವನ ದೇವಸ್ಥಾನದಲ್ಲಿ ಕಾರ್ತಿಕದ ಮಂಗಳಾರತಿಗಳಾಗಲಿ, ಕೊಡುವ ಪನಿವಾರದ ಸವಿಯಾಗಲೀ, ಎಲ್ಲವೂ ಆನಂದದಾಯಕವಾಗಿದ್ದವು.

ಪ್ರಾತಃ ಕಾಲದಲ್ಲಿ ಎದ್ದು ದಾರಿಯ ಕೆರೆಯಲ್ಲಿ ಅಥವಾ ಕಟ್ಟೆಯಲ್ಲಿ ಮುಖವನ್ನು ತೊಳೆದುಕೊಳ್ಳುವುದು, ಉದಯರಾಗವನ್ನು ಪಾಂಡವಗೀತೆಯನ್ನು ಇನ್ನೂ ಕೆಲವು ಪದಗಳನ್ನು ಹೇಳಿಕೊಳ್ಳುವುದು, ಕಾಡುಬೆರಣಿಯನ್ನು ಆಯ್ದು ಗೋಣೀಚೀಲಕ್ಕೆ ತುಂಬಿ ಕೊಳ್ಳುವುದು, ತೋಟಕ್ಕೆ ಹೋಗಿ ಹೊಸದಾಗಿ ಹಾಕಿಸಿದ್ದ ತೆಂಗಿನ ಸಸಿಗಳಿಗೆ ಬೆರಣಿಯ ಗೊಬ್ಬರವನ್ನು ಹಾಕಿ ಹುಳು ನೋಡುವುದು, ಅಲ್ಲಿ ಬಿದ್ದಿದ್ದ ತೆಂಗಿನಕಾಯಿ, ಸೋಗೆ ಮುಂತಾದವುಗಳನ್ನು ಕೂಡಿಹಾಕಿ ಕೊಂಡು, ಹೂ, ತುಳಸಿ, ಕರಿಬೇವು, ಸೊಪ್ಪು, ತರಕಾರಿ ಮುಂತಾದವನ್ನು ಮನೆಗೆ ತರುವುದು ಇವೇ ಮೊದಲಾದವು ಬೆಳಗಿನ ಕಾಲದ ನಿತ್ಯಗಟ್ಟಲೆಯ ಕೆಲಸ. ಕೆಲವರು ಬೆಳಗಿನ ಸಮಯದಲ್ಲಿ ಸ್ನಾನ–ಆಹ್ನಿಕ–ದೇವರ ಪೂಜೆ, ವಿಷ್ಣುಸಹಸ್ರನಾಮ ಪಾರಾಯಣ, ಹಾಗೆಯೇ ಊಟದ ಎಲೆ ಹಚ್ಚುವಿಕೆ, ಭೋಜನ, ಒಂದೆರಡು ಗಂಟೆಯ ನಂತರ ಕೋಣೆಯಿಂದ ಫಲವತ್ತಾದ, ರಸಭರಿತವಾದ ಹಣ್ಣು, ಬೆಲ್ಲ ಮುಂತಾದವುಗಳನ್ನು ಕಲೆಯಿಸಿ ಮಕ್ಕಳಾದಿಯಾಗಿ ಎಲ್ಲರಿಗೂ ಹಂಚುವಿಕೆ, ಕೇವಲ ವಿನೋದಕ್ಕಾಗಿ ಚದುರಂಗ, ಗಂಜೀಫ ಆಟಗಳು,

ಸಾಯಂಕಾಲ ಹುಡುಗರಿಗೆ ಬಾಯಿಪಾಠ ಸಂಧ್ಯಾವಂದನಾದಿಗಳ ಆಚರಣೆ, ದೇವರಿಗೆ ಮಂಗಳಾರತಿ ತದನಂತರ ಊಟ.

ಆಗಿನ ಯಳ್ಳಂಬಳಸೆಯ ಕೆಲವು ಗಣ್ಯರ ಪೈಕಿ ಅಯ್ಯನವರ ಮನೆತನದವರು, ನಾಡಿಗ ಮನೆತನದವರು ಮೊದಲಾದ ಆಸ್ತಿಕಮಹಾಜನರೂ ಇದ್ದರು. ಊರಿನಲ್ಲಿ ಹಬ್ಬದ ಕಾಲಕ್ಕೆ ಎಲ್ಲರ ಮನೆಯಲ್ಲೂ ಗಣಪತಿಯನ್ನು ಅವರವರೇ ಬಲು ಉತ್ಸಾಹದಿಂದ ಮಾಡಿಕೊಳ್ಳುತ್ತಿದ್ದರು. ಇವರಲ್ಲಿ ಮುಖ್ಯವಾಗಿ ಅಯ್ಯನವರ ಮನೆತನದ ವೇ॥ಬ್ರ॥ಶ್ರೀ ಕೃಷ್ಣಭಟ್ಟರ ಮತ್ತು ವೇ॥ಬ್ರ॥ಶ್ರೀ ವೆಂಕಟಸುಬ್ಬಯ್ಯನವರ ಗಣಪತಿಗಳು ಮಿಕ್ಕ ಎಲ್ಲದಕ್ಕಿಂತಲೂ ಹೆಚ್ಚು ಕಳೆಯೇರಿದಂತೆ ತೋರುತ್ತಿತ್ತು. ಆದರೆ ಶ್ರೀ ಕೃಷ್ಣಭಟ್ಟರ ಮನೆಯ ಕಾಗದದ ಮಹಲಿನ ಅಲಂಕಾರಕ್ಕೆ ಮಿಗಿಲಿಲ್ಲವೆಂದೇ ನನ್ನ ಭಾವನೆ – ಹೀಗೆಂದು ಪರಮಪೂಜ್ಯ ಹೊಳೇನರಸೀಪುರದ ಶ್ರೀಗಳು ತಮ್ಮ ಆತ್ಮಚರಿತೆಯಲ್ಲಿ, ಆ ಅಯ್ಯನವರ ಮನೆತನದವರನ್ನು ಭಕ್ತಿಯಿಂದ ಸ್ಮರಿಸಿಕೊಂಡಿರುತ್ತಾರೆ.

"ಅಯ್ಯ" ನವರ ಕೃಷ್ಣಭಟ್ಟರ ಮನೆಯನ್ನು ಒಂದು ವೇದಾಗಾರವೆಂದು ಕರೆಯಬಹುದು. ಅವರ ಮನೆಗೆ ನಾನು (ಅಂದರೆ, ಪರಮ ಪೂಜ್ಯ ಶ್ರೀಚರಣರು) ಹೋದಾಗಲೆಲ್ಲ ಬೆಟ್ಟದ ಪುರದ ಸೊಪ್ಪನ್ನು ಬಿಡಿಸುತ್ತಾ ಋಗ್ವೇದವನ್ನು ಹೇಳಿಕೊಡುತ್ತಿದ್ದ ದೃಶ್ಯದ ಚಿತ್ರವು ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಮಂತ್ರವನ್ನು ಹೇಳುತ್ತಾ ಬಿಡಿಸಿದರೆ ಸೊಪ್ಪು ಚೆನ್ನಾಗಿ ಬಿಡುತ್ತದೆ ಎಂಬ ಭಾವನೆಯು ನನ್ನ ಎಳೆಯ ಮನಸ್ಸಿಗೆ ತಾಕುತ್ತಿತ್ತು.

ಭಟ್ಟರು ಪರಮಸಾತ್ವಿಕರು. ಅವರು ಶ್ರೀ ಕೃಷ್ಣಯೋಗೀಂದ್ರರ

ಮನೆತನದವರೆಂದೂ, ಅರಸಿಕೆರೆಯ ಬಳಿಯಿರುವ ಮಾಲೇಕಲ್ಲು ತಿರುಪತಿಯ ವೇಂಕಟರಮಣನ ಸೇವೆಯನ್ನು ಮಾಡಿದ್ದಕ್ಕಾಗಿ, ಅವರ ಮನೆತನದವರಿಗೆ ಅಗ್ರತೀರ್ಥ ಮರ್ಯಾದೆ ಈ ವರೆಗೂ ನಡೆದುಕೊಂಡು ಬಂದಿದೆಯೆಂದೂ, ಈ ಮರ್ಯಾದೆಗೆ ನಡುವೆ ಯಾವದೋ ಅಡ್ಡಬಂದಾಗ ಭಟ್ಟರು ದೊರೆಗಳ ತನಕ ದೂರು ತೆಗೆದುಕೊಂಡು ಹೋಗಿ ಅದನ್ನು ಉಳಿಸಿಕೊಂಡು ಬಂದರೆಂದೂ ಈಚೆಗೆ ನನಗೆ ತಿಳಿಯಬಂತು. ನವರಾತ್ರೆಯಲ್ಲಿ ನಮ್ಮೂರಿನಲ್ಲಿ ಮೂರು ನಾಲ್ಕು ಮನೆಗಳಲ್ಲಿ ರಾಮಾಯಣ ಪಾರಾಯಣವೂ, ರಾಮಪಟ್ಟಾಭಿಷೇಕವೂ ನಡೆಯುತ್ತಿತ್ತು. ಆದರೆ ಅಯ್ಯನವರ ಕೃಷ್ಣಭಟ್ಟರ ಮನೆಯ ಪಟ್ಟಾಭಿಷೇಕವು ನನ್ನ (ಶ್ರೀಗಳ) ಮನಸ್ಸಿನಲ್ಲಿ ಹೆಚ್ಚಿನ ಮುದ್ರೆಯನ್ನು ಒತ್ತಿರುತ್ತದೆ. ಅವರ ಮನೆಯ ಶ್ರೀರಾಮನ ಪಟ್ಟಾಭಿಷೇಕದ ಕಾಲಕ್ಕೆ ಬಾಣಾವರದ ವೇ॥ಬ್ರ॥ಶ್ರೀ॥ ಲಕ್ಷ್ಮೀನಾರಾಯಣ ಶಾಸ್ತ್ರಿಗಳು ಪೂರ್ವ ಕಥೆಯನ್ನು ಹೇಳಿದ್ದೂ, ಯಗಟಿಯಿಂದ ವೇದ ಮೂರ್ತಿಗಳಾದ ಚನ್ನಭಟ್ಟರು, ಸೂರಭಟ್ಟರು ಮುಂತಾದ ವೈದಿಕರು ಬಂದು (ನನಗೆ ತಿಳಿಯದ) ಯಾವುದೋ ಒಂದು ಶಾಸ್ತ್ರಾರ್ಥ ವಿಚಾರವನ್ನು ಮಾಡಿದ್ದೂ ಕೃಷ್ಣಭಟ್ಟರ ವಿಷಯದಲ್ಲಿ ನನಗೆ (ಶ್ರೀಗಳಿಗೆ) ಹೆಚ್ಚಿನ ಗೌರವವನ್ನುಂಟುಮಾಡಿತ್ತು. ವೇದಮೂರ್ತಿಗಳಾದ ಕೃಷ್ಣಭಟ್ಟರ ಮಕ್ಕಳು ಅಸಹಾಯ ಶೂರರು. ಕೆರೆಯಹಿಂದೆ ವೇದವನ್ನು ಹೇಳಿಕೊಳ್ಳುತ್ತಾ ನೆಲವನ್ನು ಅಗೆದು ಅಡಕೆ, ಬಾಳೆ, ಸೇವಂತಿಗೆ ಹೂ ಮುಂತಾದವುಗಳನ್ನು ಬೆಳೆದು ಒಂದು ನಂದನವನವನ್ನೇ ಎಬ್ಬಿಸಿದ್ದರು. ಇದೇ ಪ್ರವೃತ್ತಿಯವರು ಅಯ್ಯನವರ ಶ್ರೀ ವೇಂಕಟಸುಬ್ಬಯ್ಯನವರು.

ಯಳ್ಳಂಬಳಸೆಯೆಂಬ ಅಗ್ರಹಾರವು, ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಕಡೂರು ತಾಲ್ಲೂಕಿಗೆ ಸೇರಿರುವ ಒಂದು ಪವಿತ್ರ ಕ್ಷೇತ್ರ. ಸಾಧಕರ, ಯತೀಂದ್ರರ, ಸಿದ್ಧರ ಬೀಡಾದ ಈ ಕ್ಷೇತ್ರವು, ಮಹಿಮಾತಿಶಯ ಸಂಪನ್ನರೂ ಲೋಕಹಿತೈಷಿಗಳೂ, ಜ್ಞಾನಿಶ್ರೇಷ್ಠರೂ ಆದ ಮೂವರು ಯತಿಪುಂಗವರಿಗೆ ಜನ್ಮ ನೀಡಿರುತ್ತದೆ. ಆ ಯತಿ ಶ್ರೇಷ್ಠರೇ ಪರಮಪೂಜ್ಯ

೧) ಶ್ರೀ ಶ್ರೀ ಶ್ರೀ ಕೃಷ್ಣಯೋಗೀಂದ್ರ ಸರಸ್ವತೀ ಪರಮಹಂಸರು,

೨) ಶ್ರೀ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳು. ಪೂರ್ವಾಶ್ರಮದಲ್ಲಿ ಯಳ್ಳಂಬಳಸೆ (ವೈ.) ಸುಬ್ಬರಾಯರೆಂದು ಪ್ರಸಿದ್ಧರಾಗಿದ್ದು ತರುವಾಯ ತುರೀಯಾಶ್ರಮವಾದ ಸಂನ್ಯಾಸಾಶ್ರಮವನ್ನು ಸ್ವೀಕಾರಮಾಡಿ, ಯಶಃಕಾಯರಾದ, ಹೊಳೆನರಸೀಪುರದ ಶ್ರೀ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು.

ಮತ್ತು

೩) ಶ್ರೀ ಶ್ರೀ ಶ್ರೀ ಜ್ಞಾನಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳು. ಇವರ ಪೂರ್ವಾಶ್ರಮದ ಚಿರಪರಿಚಿತವಾದ ಹೆಸರು ವೇದಾಂತ ಶಿರೋಮಣಿ, ವಿದ್ವಾನ್ ವೈ ಎಸ್ ವಿಠ್ಠಲಶಾಸ್ತ್ರಿಗಳೆಂದು. ಮೈಸೂರು ಮಹಾರಾಜ ಸಂಸ್ಥಾನದ ಆಸ್ಥಾನ ವಿದ್ವಾಂಸರಾಗಿ ಹೊಳೆನರಸೀಪುರದ ಶ್ರೀಗಳ ಪಟ್ಟ ಶಿಷ್ಯರಾಗಿದ್ದು, ಅವರೊಂದಿಗೆ ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲೆಯ ಸಂಪಾದಕರಾಗಿ ಜಗದ್ಗುರು ಶ್ರೀ ಶಂಕರ

ಭಗವತ್ಪಾದಾಚಾರ್ಯರ ಪ್ರಸ್ಥಾನ ತ್ರಯ ಭಾಷ್ಯಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು. ಸಂನ್ಯಾಸಪೂರ್ವದಲ್ಲಿ, ಸಖರಾಯಪಟ್ಟಣದ ಶ್ರೀ ಗುರುನಾಥರ ತೀರ್ಥರೂಪರವರಿಗೂ ಅನಂತರ ಗುರುನಾಥರಿಗೂ ಹಲವಾರು ವರ್ಷಗಳು ಆಚಾರ್ಯರಾಗಿದ್ದರು.

## ಶ್ರೀ ಶ್ರೀ ಶ್ರೀ ಕೃಷ್ಣಯೋಗೀಂದ್ರ ಸರಸ್ವತೀ ಪರಮಹಂಸರು

ಶ್ರೀ ಕೃಷ್ಣಯೋಗೀಂದ್ರರು ಚಿಕ್ಕಂದಿನಿಂದಲೂ ಅಧ್ಯಾತ್ಮ ವಿದ್ಯೆಯಲ್ಲಿ ನುರಿತವರಾಗಿದ್ದರು; ಹಾಗೆಯೇ ಲೋಕಹಿತದೃಷ್ಟಿಯನ್ನು ಜೀವನ ಪರ್ಯಂತ ಅನುಷ್ಠಾನದಲ್ಲಿಟ್ಟು ಕೊಂಡಿದ್ದರು. ಗರ್ಭಾಷ್ಟಮದಲ್ಲಿ ಉಪನೀತರಾದ ಅವರು ಮಹಾಪರಿವ್ರಾಜಕರಾಗಿದ್ದು, ಭರತಖಂಡದ ಬಹುಭಾಗವನ್ನು ಸಂಚರಿಸಿ ಭಾರತೀಯರ ಸನಾತನ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪುನರುತ್ಥಾನಕ್ಕೆ ಅಮೂಲ್ಯವಾದ ಕಾರ್ಯವೆಸಗಿದ್ದಾರೆ.

ಶ್ರೀ ಕೃಷ್ಣಯೋಗೀಂದ್ರರು ಬ್ರಹ್ಮನಿಷ್ಠರೂ, ಜೀವನ್ಮುಕ್ತರೂ ಮತ್ತು ಆಸ್ತಿಕರಿಗೆ ಆದರ್ಶ ಚರಿತರೂ ಆಗಿದ್ದರು. ಮಹತ್ತಾದ ಪುಣ್ಯ ಪುಂಜದಿಂದ, ಧರ್ಮರಕ್ಷಕನಾದ, ಮಹಿಮಾತಿಶಯಸಂಪನ್ನ ಭಗವಂತನ ಕೃಪಾತಿಶಯದಿಂದ ಮತ್ತು ಭಾಗ್ಯಪರಿಪಾಕದಿಂದ ಜನ್ಮವೆತ್ತಿದರು. ಇಂಥಹ ಸದ್ಗುರುಗಳ ಪವಿತ್ರ ಚರಿತ್ರೆಯ ಚಿಂತನವು ಇಹ–ಪರಗಳ ಶ್ರೇಯಸ್ಸಿಗೆ ಕಾರಣವಾಗಿರುತ್ತದೆ. ಪರಮಹಂಸ ಪರಿವ್ರಾಜಕಾಶ್ರಮವನ್ನು ಸ್ವೀಕರಿಸಿ, ವೇದಾಂತರಹಸ್ಯಜ್ಞರಾಗಿದ್ದರೂ, ಸಂಪ್ರದಾಯ ಪರಿಪಾಲನೆಯ ಉದ್ದೇಶದಿಂದ, ಗುರೂತ್ತಮರನ್ನು ಆಶ್ರಯಿಸಿ, ಮಹಾವಾಕ್ಯಾದ್ಯುಪದೇಶಗಳನ್ನು ಪಡೆದರು. ಲೋಕ ಸಂಗ್ರಹ ದೃಷ್ಟಿಯಿಂದ

ಭಾರತ ಭೂಭಾಗದಲ್ಲಿ ಸರ್ವತ್ರ ಸಂಚರಿಸಿ ಅನ್ವರ್ಥವಾಗಿ ಪರಿವ್ರಾಜಕರೆನಿಸಿದರು. ತನ್ಮೂಲಕ ಅನೇಕ ಪಂಡಿತ ಶಿಷ್ಯರು ಬೆಳಕಿಗೆ ಬಂದರು. ಸ್ವಕೃತವಾದ ಮತ್ತು ಪ್ರಮಾಣಭೂತವಾದ ಭಾಷ್ಯಾದಿ-ಪ್ರಬಂಧಗಳನ್ನು ಪ್ರಚಾರಪಡಿಸಿದರು. ಪರಂಪರೆಯಿಂದ ಬಂದಂತಹ ಅರ್ಥಪೂರ್ಣವೈದಿಕ ಸಮಯಾಚಾರಗಳನ್ನು ವಿವರವಾಗಿ ತಿಳಿಯಪಡಿಸಿದರು. ಅವರ ಪಾಂಡಿತ್ಯವು ಅಖಂಡವಾಗಿದ್ದಿತು. ಮೇಧಾ ಶಕ್ತಿಯೂ ಅಸಾಧಾರಣ. ಸರಸವೂ ಸರಳವೂ ಆದ ವಾಕ್ಸಂಪತ್ತು. ತೇಜಸ್ಸು-ಯಶಸ್ಸು ಮತ್ತು ತಪಸ್ಸುಗಳ ಗಣಿಯಾಗಿದ್ದರು.

ಮಹಾಮಹಿಮೆಯಿಂದ ಕೂಡಿದ್ದರೂ, ಮಹಿತಾತ್ಮರಾದ ಈ ಸದ್ಗುರುಗಳು, ಬಾಲ್ಯದಲ್ಲಿ ವೇದ-ವೇದಾಂತ ಭಾಗಗಳನ್ನು ಅಭ್ಯಾಸ ಮಾಡಿದರು. ನ್ಯಾಯ ಮೀಮಾಂಸಾದಿ ಶಾಸ್ತ್ರಗಳಲ್ಲಿ ಪರಿಣತಿ ಪಡೆದರು. ಸದ್ಗುರುಗಳ ಪಾದುಕೆಗಳನ್ನು ಆರಾಧಿಸಿ ಅನುಗೃಹೀತರಾದರು. ಸಂಪ್ರದಾಯವರ್ತಿಗಳಾಗಿ ವೇದಾಂತ ಸಿದ್ಧಾಂತಗಳನ್ನು ಅರಿತು, ಶಿಷ್ಯರನ್ನು ತಯಾರು ಮಾಡಿದರು. ಪರಿವ್ರಾಜಕರಾಗಿ ಸಂಚರಿಸುತ್ತಾ ಸ್ವಧರ್ಮಾಚರಣ ನಿಯಮಗಳನ್ನು ಪ್ರಕಾಶಗೊಳಿಸಿದರು. ಪಾದಯಾತ್ರೆಯಿಂದ ಧರಿತ್ರೀತಲವನ್ನು ಪವಿತ್ರಗೊಳಿಸಿದರು.

ತಮ್ಮ ಉಪದೇಶಾಮೃತವೆಂಬ ಸುವೃಷ್ಟಿಯಿಂದ ಹಾಗೂ ತಪಶ್ಶಕ್ತಿಯಿಂದ ಕ್ರಮವಾಗಿ ದುರ್ಭಿಕ್ಷಾದಿಗಳನ್ನು ಮತ್ತು ದುರಾಚಾರವನ್ನು ದೂರ ಮಾಡಿದರು. ಸಾಧುಜನರನ್ನು ಸಂರಕ್ಷಿಸಿದರು, ಧರ್ಮಶಾಲೆಗಳನ್ನು ಕಟ್ಟಲು ಪ್ರೋತ್ಸಾಹಿಸಿದರು. ಗುಡಿಗೋಪುರಗಳನ್ನು ಜೀರ್ಣೋದ್ಧಾರ

ಮಾಡಿದರು. ತಾವಾದರೋ ಏನನ್ನೂ ಬಯಸದೆ ಪರತತ್ತ್ವಚಿಂತನೆಯಲ್ಲಿ ತಲ್ಲೀನರಾಗಿ ಸ್ವಾತ್ಮಾರಾಮರಾದರು. ಇಂಥಹ ಮಹಾಮಹಿಮರಾದ ನಮ್ಮ ಆಚಾರ್ಯರ ಗುಣವರ್ಣನೆಯಾನ್ನಾಗಲೀ ಅಥವಾ ಚರಿತ್ರಲೇಖನವನ್ನಾಗಲಿ ಬರೆಯಲು ಪ್ರಯತ್ನಿಸುವುದು ಉಪಹಾಸ್ಯಕ್ಕೆ ಎಡೆಯಾಗುತ್ತದೆ, ಹೇಗೆಂದರೆ ಕುಳ್ಳನು ಎತ್ತರದ ಮರದಲ್ಲಿರುವ ಹಣ್ಣನ್ನು ಬಯಸುವಂತೆ. ಆದಾಗ್ಯೂ ನಿರಂತರ ಗುರುಸ್ಮರಣೆಯ ಲಾಭೈಕದೃಷ್ಟಿಯುಳ್ಳ ಗುರುಬಂಧುಗಳಾದ ನಮಗೆ ಇಂತಹ ದುಃಸಾಧ್ಯವಾದ ಕರ್ಮದಲ್ಲಿ ಯಥಾಶಕ್ತಿ ಪ್ರವೃತ್ತಿಯುಂಟಾಗಿರುವುದು ಅನುಚಿತವಾಗಲಾರದು.

**ಜನ್ಮ**

**ಸರ್ವಾನುಗ್ರಹಕರ್ತೃತ್ವಾದ್ ಈಶ್ವರಃ ಕರುಣಾನಿಧಿಃ ।**
**ಆಚಾರ್ಯರೂಪಮಾಸ್ಥಾಯ ದೀಕ್ಷಯಾ ಮೋಚಯೇತ್ ಪಶೂನ್ ॥**

"ಕರುಣಾನಿಧಿಯಾದ ಈಶ್ವರನು, ಎಲ್ಲರನ್ನೂ ರಕ್ಷಿಸಬೇಕೆಂಬ ಜವಾಬ್ದಾರಿಯಿಂದ, ಶ್ರೀಗುರುರೂಪವನ್ನು ತಾಳಿ ದೀಕ್ಷೆಯಿಂದ, ಎಲ್ಲ ಜೀವಿಗಳನ್ನೂ (ಬಂಧನದಿಂದ) ಬಿಡುಗಡೆಮಾಡುತ್ತಾನೆ, ಜೀವಿಗಳಿಗೆ ಮೋಕ್ಷವನ್ನು ಕರುಣಿಸುತ್ತಾನೆ".

**"ಪ್ರಾಪ್ಯ ಪುಣ್ಯಕೃತಾಂ ಲೋಕಾನ್, ಉಷಿತ್ವಾ ಶಾಶ್ವತೀಃ ಸಮಾಃ ।**
**ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ" ॥**

ಕಲ್ಯಾಣ ಕಾರ್ಯವನ್ನು ಮಾಡಿದ ಯಾವನೊಬ್ಬನಿಗೂ ದುರ್ಗತಿಯುಂಟಾಗಲಾರದು. ಯೋಗದಲ್ಲಿ ಭ್ರಷ್ಟನಾದವನು, (ಯೋಗದ

ಪೂರ್ಣತೆಗಾಗಿ) ಪುಣ್ಯವಂತರ ಲೋಕಗಳನ್ನು ಸೇರಿ ಬಹುವರ್ಷ ಅಲ್ಲಿ ವಾಸವಾಗಿದ್ದು, ಕಟ್ಟಕಡೆಗೆ ಪರಿಶುದ್ಧರೂ ಶ್ರೀಮಂತರೂ ಆದ ಜ್ಞಾನಿಗಳಾದ ಯೋಗಿಗಳ ಮನೆಯಲ್ಲೇ ಜನಿಸುತ್ತಾನೆ. – ಭಗವದ್ಗೀತೆ ೬–೪೧

ಶ್ರೀ ಕೃಷ್ಣಯೋಗೀಂದ್ರರು ಪೂರ್ವ (ಜನ್ಮ)ದಲ್ಲಿ ಯೋಗಮಾರ್ಗದ ಸಾಧನೆಯ ಶಿಖರ ತಲುಪಿ ಪುಣ್ಯಕೃತವಾದ ಲೋಕಗಳಲ್ಲಿ ವಾಸಮಾಡಿ ಅದರ ಪೂರ್ಣತೆಗಾಗಿ, ಫಲಸಿದ್ಧಿಗಾಗಿ ಉದಾತ್ತವೂ ಸುಸಂಸ್ಕೃತವೂ ಆದ ಪುನರ್ಜನ್ಮವನ್ನು (ಶ್ರೀ ಕೃಷ್ಣಯೋಗಿಂದ್ರರಾಗಿ) ಪಡೆದಿರಬಹುದು. ಇದು ಭಗವದ್ಗೀತೆಯಲ್ಲಿ ಬರುವ ಭಗವದ್ವಚನವು. ಅಧ್ಯಾತ್ಮ ವಿದ್ಯೆಗೆ ಅವಶ್ಯಕವಾದ, ಅಹಿಂಸೆ, ಸತ್ಯ, ಆರ್ಜವ, ಸಹನೆ, ನಿತ್ಯಾನಿತ್ಯವಿವೇಕ, ಇಹಾಮುತ್ರವಿರಾಗ, ಶಮ–ದಮಾದಿಗಳು ಮತ್ತು ಮುಮುಕ್ಷುತ್ವಾದಿ ಜ್ಞಾನಸಾಧನಗಳನ್ನು ರೂಢಿಸಿಕೊಂಡಿದ್ದರು. ಅನೇಕ ಜನ್ಮಗಳಿಂದುಂಟಾದ ಸಮ್ಯಕ್ ದರ್ಶನವನ್ನು ಪಡೆದು “ಅನೇಕ ಜನ್ಮ ಸಂಸಿದ್ಧ”ರಾಗಿದ್ದರು.

**ಶ್ರೀ ಗುರುನಾಥರು ಒದಗಿಸಿದ ಮಾಹಿತಿಯ** ಮೇರೆಗೆ ಶ್ರೀ ಶ್ರೀ ಶ್ರೀ ಕೃಷ್ಣಯೋಗೀಂದ್ರ ಸರಸ್ವತೀ ಪರಮಹಂಸರು ಇಂದಿಗೆ (೨೦೦೯ ಇಸವಿ) ಸರಿಸುಮಾರು ೪೫೦ ವರ್ಷಗಳ ಹಿಂದೆ ಯಳ್ಳಂಬಳಸೆಯಲ್ಲಿ ಜನ್ಮತಾಳಿದರು. ತಾಯಿ–ತಂದೆಯವರ ತಪಸ್ಸಿನ ಫಲವಾದ ಅವರು ಅವತರಿಸಿದ ಶುಭ ತಿಥಿ – ಜ್ಯೇಷ್ಠಮಾಸದ ಬಹುಳ ಬಿದಿಗೆ. ವಾಸಿಷ್ಠೋಪಮನ್ಯು ಗೋತ್ರಭೂಷಣರಾಗಿದ್ದ ಅವರು ಋಗ್ವೇದ ಶಾಖೆಯವರಾಗಿದ್ದರು.

ಸಾತ್ವಿಕ ಕುಟುಂಬದ ಮಾತಾಪಿತೃಗಳೂ ಸಹ ಆಗರ್ಭ ಶ್ರೀಮಂತರಾಗಿದ್ದರೂ, ಆತ್ಮಜ್ಞಾನಸಂಪನ್ನರೂ ಸೌಜನ್ಯಾದಿ ಸದ್ಗುಣನಿಧಿಗಳೂ

ಆಗಿದ್ದರು. ಕುಲದೇವತೆಯು ಶ್ರೀದೇವಿ–ಭೂದೇವಿ ಸಮೇತನಾದ ಶ್ರೀನಿವಾಸ. ಮನೆದೇವರ ಪವಿತ್ರ ಕ್ಷೇತ್ರ – ಚಿಕ್ಕ ತಿರುಪತಿ ಅಥವಾ ಮಾಲೇಕಲ್ಲು. ಇಷ್ಟದೇವರು – ಶ್ರೀಗೋಪಾಲಕೃಷ್ಣ.

**ಆಚಾರ್ಯರೆಂದರೆ ಯಾರು?**

ಭಗವಂತನು ಮಾನವ ಕುಲವನ್ನು ಉದ್ಧಾರಮಾಡುವ ಸಲುವಾಗಿ ಅವತಾರವೆತ್ತುವಂತೆ, ಶಿಷ್ಯೋದ್ಧಾರಕ್ಕಾಗಿ ಗುರುವಾಗಿಯೂ ಅವತರಿಸುತ್ತಾನೆ. ಯಾರು ಸ್ವತಃ ಉಪನಿಷತ್ತುಗಳ ಸಾರಸರ್ವಸ್ವವನ್ನು ತಿಳಿದು ಅಜ್ಞಾನದಿಂದ ಮತ್ತು ಕಾಮದಿಂದ ಮುಕ್ತನಾಗಿ, ಆತ್ಮಾನಂದದಲ್ಲಿ ತಲ್ಲೀನನಾಗುತ್ತಾನೆಯೋ ಮತ್ತು ಅದೇ ದಾರಿಯನ್ನು ಯಾರು ನಮಗೆ ತೋರಬಲ್ಲರೋ ಆತನೇ ಗುರು ಅಥವಾ ಶ್ರೇಷ್ಠನಾದ ಆಚಾರ್ಯ. ಇಂಥಹ ಆತ್ಮಸಾಕ್ಷಾತ್ಕಾರ ಪಡೆದ ಆಚಾರ್ಯನು ಭಗವದ್ರೂಪಿ. ಹಾಗಾಗಿ, ಗೀತೆಯಲ್ಲಿ ಶ್ರೀಕೃಷ್ಣ "ನನಗೂ ಜ್ಞಾನಿಗೂ ವ್ಯತ್ಯಾಸವೇ ಇಲ್ಲ" ಎಂದು ಹೇಳಿದ್ದಾನೆ. "ಇವರು" ತತ್ತ್ವವನ್ನು ಅರಿತು ಉಪದೇಶಿಸುವುದಲ್ಲದೇ, ತಾವು ಅದನ್ನ ಆಚರಿಸಿ ಶಾಸ್ತ್ರಾನುಗುಣವಾದ ನಡತೆಯಿಂದ ಕೂಡಿದ್ದು, ಲೋಕಕ್ಕೆ ದಾರಿದೀಪವಾಗಿರುತ್ತಾರೆ. ಇವರನ್ನೇ ಆಚಾರ್ಯರೆನ್ನುವರು.

ಆಚಾರ್ಯ ಶಬ್ದವು ವ್ಯಾಕರಣದ ಪ್ರಕಾರ "ಆಚರ್ಯತೇ ಅನೇನ" – ಯಾವನಿಂದ "ತಾನು ಉಪದೇಶಮಾಡುವ ಶಾಸ್ತ್ರಮಾರ್ಗವು ಆಚರಿಸಲ್ಪಡುತ್ತದೆಯೋ ಅವನು (ಆ+ಚರಗತೌ–ಣ್ಯತ್) ಎಂಬ ಅರ್ಥವನ್ನು ತಿಳಿಸುತ್ತದೆ" –

**“ವೇದಮಧ್ಯಾಪಯೇತ್ ದ್ವಿಜಃ ।**

**ಸಕಲ್ಪಂ ಸರಹಸ್ಯಂ ಚ ತಮಾಚಾರ್ಯಂ ಪ್ರಚಕ್ಷತೇ”**

ಆಚಾರ್ಯನಿಗೆ ಉಪದೇಶವು ಎಷ್ಟು ಮುಖ್ಯವೋ ಆಚರಣೆಯೂ ಅಷ್ಟೇ ಮುಖ್ಯ. ಆಚಾರ್ಯ ವೇದಾಂತದೇಶಿಕರು, ಆಚಾರ್ಯನ ಗುಣ, ಸ್ವರೂಪವನ್ನು ಹೀಗೆ ವರ್ಣಿಸುತ್ತಾರೆ–

**“ಸಿದ್ಧಂ ಸತ್‌ಸಂಪ್ರದಾಯೇ ಶ್ರೋತ್ರಿಯಂ ಬ್ರಹ್ಮನಿಷ್ಠಂ ಸತ್ಯಸ್ಥಂ ಸಾಧುವೃತ್ಯಾ ಸಮೇತಂ । ಡಂಭಾಸೂಯಾ ವಿಮುಕ್ತಂ–ದಯಾಳುಂ”.**

ಅವನು ಸಿದ್ಧನಾಗಿರಬೇಕು. ಸತ್ಯದಲ್ಲಿ ನೆಲಸಿರಬೇಕು. ಶಿಷ್ಯರ ತಪ್ಪನ್ನು ತಿದ್ದಬೇಕು. ಡಂಭ, ಅಸೂಯೆ ಮೊದಲಾದ ಅನಾತ್ಮಗುಣರಹಿತನಾಗಿರಬೇಕು. ಇಂಥಹ ಗುರುವನ್ನು ಭಗವಂತನಿಗೆ ಸಮನೆಂದು ಭಾವಿಸಿ ಪ್ರತ್ಯುಪಕಾರ ಬುದ್ಧಿಯಿಲ್ಲದೇ ಅವನ ಸೇವೆಯನ್ನು ಮಾಡಬೇಕು ಎಂದು ಘೋಷಿಸುತ್ತಾರೆ.

**“ಆಚಾರ್ಯಃ ಸದ್ಭಿಃ ಅಪ್ರತ್ಯುಪಕರಣಧಿಯಾ**

**ದೇವವತ್ ಸ್ಯಾದುಪಾಸ್ಯಃ”**

ಶ್ರೀ ಶಂಕರಭಗವತ್ಪಾದಾಚಾರ್ಯರು ಇದೇ ಅಭಿಪ್ರಾಯದಲ್ಲಿ “ಅಜ್ಞಾನದ ಜನ್ಮವನ್ನು ಕಳೆದು ಜ್ಞಾನ ಜನ್ಮವನ್ನು ಅನುಗ್ರಹಿಸುವ” ಗುರು ಸ್ವರೂಪವನ್ನು ತಿಳಿಸುತ್ತಾರೆ.

“ಅವನು ವೇದಾಂತವೇದಿಯಾಗಿರಬೇಕು. ಪಾಪರಹಿತನು, ಕಾಮದ ಹೊಡೆತಕ್ಕೆ ಸಿಕ್ಕದವನು. ಬ್ರಹ್ಮವಿದರಲ್ಲಿ ಶ್ರೇಷ್ಠತಮನು. ಪರಬ್ರಹ್ಮದಲ್ಲಿ

ವಿಶ್ರಾಂತನು. ಶಿಷ್ಯಹಿತ ಸಂರಕ್ಷಕನು. ಸೌದೆಯಿಲ್ಲದ ಅಗ್ನಿಯಂತೆ ಶಾಂತನು.''

''**ಶ್ರೋತ್ರಿಯೋಽವೃಜಿನೋಽಕಾಮಹತೋ ಯೋ ಬ್ರಹ್ಮವಿತ್ತಮಃ ।**

**ಬ್ರಹ್ಮಣ್ಯುಪರತಶ್ಶಾಂತಃ ನಿರಿಂಧನ ಇವಾನಲಃ**'' ॥

ಆಚಾರ್ಯ ಅಥವಾ ಗುರುವಿಗಿಂತ ಹೆಚ್ಚಿನ ಬೇರೆ ಯಾವ ದೇವರನ್ನೂ ನಾವು ತಿಳಿದಿಲ್ಲ.

''**ಆಚಾರ್ಯಾದಿಹ ದೇವತಾಮಧಿಕಾಂ ಅನ್ಯಾಂ ನ ಮನ್ಯಾಮಹೇ.**''

ಹೀಗೆ ಆಚಾರ್ಯ ಶ್ರೀಗುರುವಿನ ಮಹಿಮೆಯನ್ನು ಕೊಂಡಾಡುವ ಈ ವಾಕ್ಯಗಳು ಕೇವಲ ಹೊಗಳಿಕೆಯ ಅರ್ಥವಾದವಲ್ಲ. ಸಾಕ್ಷಾತ್ತಾಗಿ ಅನುಭವಕ್ಕೆ ಬರುವ ಸತ್ಯ ಎಂಬುದು ಅನುಭವಿಗಳ ಮಾತು. ಆದರೆ ಇದು ''**ಬ್ರಹ್ಮನಿಷ್ಠ**''ನಾದ ಗುರುವಿಗೆ ಅನ್ವಯಿಸುತ್ತದೆ. ಬ್ರಹ್ಮನಿಷ್ಠನೆಂದರೆ ''**ಬ್ರಹ್ಮಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡವನು**'' ಎಂದು.

''**ಸಾಕ್ಷಾತ್‌ಕೃತ–ಪರಮಪುರುಷ ಸ್ವರೂಪಃ**''

– ಶ್ರೀ ರಾಮಾನುಜಾಚಾರ್ಯರ ''ವೇದಾಂತದೀಪ''

## ಗೃಹಸ್ಥಾಶ್ರಮ ಜೀವನ

ಗರ್ಭಾಷ್ಟಮದಲ್ಲಿ ಉಪನೀತರಾದ ಅವರು, ಸಂಪ್ರದಾಯಾನುಸಾರವಾಗಿ, ಗುರುಕುಲ ಪದ್ಧತಿಯಂತೆ ಸಾಂಗವೇದಾಧ್ಯಯನ ಸಂಪನ್ನರಾದರು. ಅವರು ತಮ್ಮ ೧೨ನೆಯ ವಯಸ್ಸಿನಲ್ಲಿ ಗಾಯತ್ರೀ ಪುರಶ್ಚರಣೆ, ತ್ರಿಚಕಲ್ಪವಾದ ಅರುಣಪೂರ್ವಕ ಸೂರ್ಯನಮಸ್ಕಾರ ಮತ್ತು

ಯೋಗಾದಿಗಳಲ್ಲಿ ನಿರಂತರ ಸಾಧನೆಗಳ ಮೂಲಕ ಅದ್ವಿತೀಯ ಕೌಶಲ್ಯವನ್ನು ಪಡೆದರು. ಅವರು ೨೭ನೇ ವರ್ಷದವರೆಗೆ ತಪಸ್ಸನ್ನು ಆಚರಿಸಿದರು. ೨೮ನೇ ವರ್ಷದಿಂದ ಆರಂಭಿಸಿದ ಅಖಂಡ ಭಾರತಾದ್ಯಂತ ಸಂಚಾರವು ಅವರ ೪೮ನೇ ವರ್ಷದಲ್ಲಿ ಸಂಪನ್ನವಾಯಿತು. ತಮ್ಮ ದೈವದತ್ತವಾದ ಆಧ್ಯಾತ್ಮಿಕ ಜ್ಞಾನದ ಜೊತೆಗೆ ವಿವಿಧ ಜನರ ಆಚಾರ–ವಿಚಾರ–ಸಂಸ್ಕೃತಿ ಪರವಾದ ಲೋಕಜ್ಞಾನವನ್ನೂ ಸಂಪಾದಿಸಿ, ಲೋಕ ಸಂಗ್ರಹ ಕಾತರರಾದರು. ಹೀಗೆ ಲೌಕಿಕ ಮತ್ತು ಪಾರಮಾರ್ಥಿಕ ಜ್ಞಾನ ಸಂಪನ್ನರಾಗಿ, ಈಗಿನ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೋಕಿನ ಯಳ್ಳಂಬಳಸೆ ಗ್ರಾಮದಲ್ಲಿ ವೃದ್ಧರಾದ ತಾಯಿ–ತಂದೆಯರೊಡನೆ ಲೌಕಿಕವಾಗಿ ವಾಸಿಸುತ್ತಿದ್ದರು.

ಶ್ರೀ ಕೃಷ್ಣಯೋಗೀಂದ್ರರು ಪರಮರ್ಷಿ ಯಾಜ್ಞವಲ್ಕ್ಯಾದಿಗಳಂತೆ ಜ್ಞಾನಿಗಳೂ ಹಾಗೂ ಗೃಹಸ್ಥರೂ ಆಗಿದ್ದರು. ಪ್ರಾಕೃತ ಜನರು ಮಾಡುವಂತೆ ಹೊಲ–ಮನೆ, ದನಕರುಗಳು ತೋಟ–ತುಡಿಕೆಗಳು ಮೊದಲಾದ ಭೋಗ್ಯರಾಶಿಗಳನ್ನು ತಮಗಾಗಿ ಇಟ್ಟುಕೊಳ್ಳದೆ, ಪರಾರ್ಥೈಕ ಪ್ರಯೋಜನಕ್ಕಾಗಿ ಎಲ್ಲವನ್ನೂ ದಾನ ಮಾಡಿದರು. ಪಿತ್ರಾರ್ಜಿತವಾದ ಮತ್ತು ಭಕ್ತಜನರು ಕೊಟ್ಟ ಸುಮಾರು ೨೫೦೦ ಎಕರೆ ಜಮೀನನ್ನು ಅವಶ್ಯಕತೆಯುಳ್ಳ ಯೋಗ್ಯ ಜನರಿಗೆ ಕೊಟ್ಟು ಬಿಟ್ಟರು. ಇದಕ್ಕೆ ಪೂರಕವಾಗಿ ಹಲವಾರು ವರ್ಷ ಮೌನ ವ್ರತವನ್ನು ಆಚರಿಸಿದರು. ಮೌನವೆಂದರೆ ಮಾತನಾಡದೇ ಇರುವುದು ಎಂದರ್ಥವಲ್ಲ. ಏಕೆಂದರೆ ಮೂಕನೂ ಮಾತನಾಡುವುದಿಲ್ಲ. ಇದರಿಂದ ಆಧ್ಯಾತ್ಮಿಕ ಉನ್ನತಿಗೆ ಯಾವ ಸಹಾಯವೂ ಆಗುವುದಿಲ್ಲ. ಪ್ರಪಂಚದ ಮಾತುಗಳನ್ನು ತಲೆಗೆ ಹಚ್ಚಿಕೊಳ್ಳದೇ ಆಡದೇ ಇರುವುದು ನಿಜವಾದ ಮೌನ.

ಪುತ್ರರಿಂದ ಮನುಷ್ಯಲೋಕವನ್ನು, ಕರ್ಮದಿಂದ ಪಿತೃಲೋಕವನ್ನು, ಉಪಾಸನೆಯಿಂದ ದೇವಲೋಕವನ್ನು ಗೆಲ್ಲಬಹುದೆಂಬುದು ಶಾಸ್ತ್ರದ ಸಮಯ.

**"ಬ್ರಹ್ಮಚಾರೀ ಗೃಹಸ್ಥೋವಾ ವಾನಪ್ರಸ್ಥೋಽಥವಾ ಪುನಃ ।**

**ವಿರಕ್ತಃ ಸರ್ವಕಾಮೇಭ್ಯಃ ಪಾರಿವ್ರಾಜ್ಯಂ ಸಮಾಶ್ರಯೇತ್ ॥"**

ಎಂಬ ಸ್ಮೃತ್ಯುಕ್ತಿಗೆ ಅನುಸಾರವಾಗಿ, ಗೃಹಸ್ಥಾಶ್ರಮವನ್ನು ಸ್ವೀಕರಿಸಿ, ತಮ್ಮ ಅಧ್ಯಯನ, ಅಧ್ಯಾಪನ, ಅತಿಥಿ ಸೇವೆ ಮೊದಲಾದ ಕಾರ್ಯಗಳಲ್ಲಿ ನಿರತರಾಗಿದ್ದರು. ಅವರ ತಾಯಿ-ತಂದೆಯವರು ಮಗನ (ಶ್ರೀ ಕೃಷ್ಣಯೋಗೀಂದ್ರರ) ಮದುವೆಯ ಸಂದರ್ಭದಲ್ಲಿ ಕನ್ಯೆಯ ಮನೆಗೆ ಬಹು ಆಭರಣಾದಿಗಳ ಜೊತೆಗೆ ಯಥೇಚ್ಛವಾಗಿ ದಿನಸಿ ಸಾಮಗ್ರಿಗಳನ್ನು ವಿತರಿಸಿದರು. ಯಾವ ಕಾರಣಕ್ಕೂ ಅನ್ಯರಿಗೆ ತೊಂದರೆಕೊಟ್ಟು ಕೈಚಾಚ ಬಾರದು ಎಂಬುದು ಅವರ ಕುಟುಂಬದ ಧ್ಯೇಯವಾಗಿತ್ತು.

## ವೈರಾಗ್ಯ ಜೀವನ

ಸಂನ್ಯಾಸವೆಂದರೆ ಬಿಡುವುದು. ಬರಿಯ ವೈರಾಗ್ಯವೇ ಸಂನ್ಯಾಸಕ್ಕೆ ಸಾಕಾದರೂ, ಶ್ರವಣ-ಮನನ-ನಿಧಿಧ್ಯಾಸನಾದಿಗಳನ್ನು ಉತ್ಕಟೇಚ್ಛೆಯಿಂದ ಅನುಷ್ಠಿಸಿ ಸಂನ್ಯಾಸಕ್ಕೆ ಮುಖ್ಯ ಅರ್ಹತೆಯನ್ನು ಸಂಪಾದಿಸಿದರು. ದೇವಲೋಕ-ಮನುಷ್ಯಲೋಕ-ಪಿತೃಲೋಕವೆಂಬ ಏಷಣಾತ್ರಯವನ್ನು ತ್ಯಜಿಸಿದರು; ಕಾರಣ ಅವುಗಳು ಅನಿತ್ಯಫಲವುಳ್ಳದ್ದು.

"ಯದಹರೇವ ವಿರಜೇತ್, ತದಹರೇವ ಪ್ರವ್ರಜೇತ್"

ಯಾವಾಗ ವೈರಾಗ್ಯ ಮೂಡುವುದೋ, ಆಗಲೇ ಪಾರಿವ್ರಾಜ್ಯವನ್ನು ಸ್ವೀಕರಿಸಬೇಕು (ಹೊರಡಬೇಕು)" ಎಂಬಂತೆ. ಪ್ರವೃತ್ತಿ ಲೋಕಧರ್ಮದ್ದಾದರೆ, ನಿವೃತ್ತಿಧರ್ಮವು ವೈರಾಗ್ಯದ್ದಾಗಿರುತ್ತದೆ. ಮುಮುಕ್ಷುಗಳ ಕಾಮಧೇನುವಾದ ಅವರು ಫಲಾಪೇಕ್ಷೆಯಿಲ್ಲದೆ, ಸ್ವಕರ್ಮವನ್ನು ಈಶ್ವರಾರಾಧನೆಯೆಂದು ಮಾಡಿ ತಮ್ಮ ಗೃಹದಲ್ಲಿದ್ದುಕೊಂಡೇ ಕರ್ಮಯೋಗವನ್ನು ಆಚರಿಸಿ ಹೆಚ್ಚಿನ ಪುರುಷಾರ್ಥದ ಉತ್ಕಟೇಚ್ಛೆಯಿಂದ ಬಳುವಳಿಯಾಗಿ ಬಂದ ತಮ್ಮ ಸ್ವತ್ತನ್ನು, ತನ್ನನ್ನು ಅವಲಂಬಿಸಿದವರಿಗೆ ಕೊಟ್ಟು, ವಿಧ್ಯುಕ್ತರೀತಿಯಿಂದ ಕರ್ಮ ಸಂನ್ಯಾಸವನ್ನು ಅನುಸರಿಸಿದರು. ವೇದಾಂತೋಪದಿಷ್ಟವಾದ ಬ್ರಹ್ಮಾತ್ಮೈಕ್ಯಾನುಭೂತಿಗಾಗಿ ಮಹಾ ವಾಕ್ಯೋಪದೇಶವನ್ನು ಮತ್ತು "ತ್ವಂ ಪದಾರ್ಥದ" ವಿವೇಚನೆಗಾಗಿ ಪರಮಹಂಸ ಪಾರಿವ್ರಾಜ್ಯವನ್ನು ಸ್ವೀಕರಿಸಲು ನಿಶ್ಚಯಿಸಿದರು. ಹೇಗೆ ಗೃಹಸ್ಥನಿಗೆ ಯಜ್ಞಯಾಗಾದಿಗಳು, ಬ್ರಹ್ಮಚಾರಿಗೆ ಗುರು ಶುಶ್ರೂಷೆ, ವಾನಪ್ರಸ್ಥನಿಗೆ ತಪಸ್ಸು ಅಸಾಧಾರಣವಾಗಿರುವಂತೆ, ಭಿಕ್ಷುವಿಗೆ ೧) ಇಂದ್ರಿಯ ಸಂಯಮ ೨) ಚಿತ್ತೈಕಾಗ್ರತೆ ಮತ್ತು ೩) ತ್ವಂ ಪದಾರ್ಥದ ವಿವೇಚನೆ ಅವಶ್ಯ ಕರ್ತವ್ಯ. ಆಗ ಸಾಧಕನು "**ಬ್ರಹ್ಮಸಂಸ್ಥ**" ಎನಿಸುತ್ತಾನೆ; ಅಂದರೆ ಮಿಕ್ಕೆಲ್ಲಾ ವ್ಯಾಪಾರವನ್ನು ಬಿಟ್ಟು ಪ್ರಣವನಿಷ್ಠನಾಗಿದ್ದು, ಅದರ ಧ್ಯಾನ, ಅರ್ಥ ವಿವೇಚನೆಗೆ ತೊಡಗಬೇಕು. ಅವರು ಬಾಲ್ಯದಿಂದಲೇ ವಿನಯ–ಸೌಜನ್ಯ–ಪರೋಪಕಾರ ಬುದ್ಧಿ–ಗುರುಹಿರಿಯರಲ್ಲಿ ನಮ್ರ ಭಾವನೆಗಳನ್ನು ರೂಢಿಸಿ ಕೊಂಡಿದ್ದರು.

ವಿರಕ್ತ ಶಿರೋಮಣಿಗಳಾಗಿದ್ದ ಅವರು ತಮಗೆ ಸಂದ ರಾಜಸತ್ಕಾರ,

ವೈಭವ, ಆಡಂಬರ ಸೂಚಕವಾದ ಲಾಂಛನಗಳು–ಬಿರುದುಬಾವಲಿಗಳನ್ನು ತ್ಯಜಿಸಿ, ತಪಸ್ಸಿನ ಪರಾಕಾಷ್ಠವನ್ನು ತಲುಪಿ ಅಂತರ್ಮುಖಿಗಳಾದರು. ತರುವಾಯ ಅವಧೂತ ಸ್ಥಿತಿಯನ್ನು ತಲುಪಿದರು. ಅಂದಿನಿಂದ ಅವರು ಎಲ್ಲಕಡೆ–ಎಲ್ಲರಲ್ಲಿ–ಎಲ್ಲಕಾಲದಲ್ಲಿ ಪರಮಾತ್ಮನ ದರ್ಶನವನ್ನು ಪಡೆದರು. ಸಾಂಸಾರಿಕ ವಿಚಾರಗಳಲ್ಲಿ, ಲೋಕದ ವಿಚಾರದಲ್ಲಿ ಅನಾಸಕ್ತಿಮೂಡಿತು. ಮನಃ ಪ್ರವೃತ್ತಿ ವೈರಾಗ್ಯದತ್ತ ಒಲಿದಿತ್ತು. ಸಜ್ಜನರ ಕಥಾಶ್ರವಣದಲ್ಲಿ ಉತ್ಸಾಹ ತೋರಿತು. ಆಸ್ತಿಕ್ಯ, ವೈರಾಗ್ಯ ಮತ್ತು ಧರ್ಮಶ್ರದ್ಧೆಯನ್ನು ಪ್ರಸಾರಮಾಡುವ ಪರಿವ್ರಾಜಕನ ಲಕ್ಷಣ ಗೋಚರಿಸಿತು. ಇಷ್ಟು ಹೊತ್ತಿಗಾಗಲೇ ಅವರು ಕಠೋರ ತಪಸ್ಸು, ಮೌನವ್ರತ, ವಿರಕ್ತತೆ ಜೊತೆಜೊತೆಗೆ ಶ್ರುತಿ–ಸ್ಮೃತಿ–ಪುರಾಣೇತಿಹಾಸಗಳಲ್ಲಿ ತಲಸ್ಪರ್ಶಿಯಾದ ಪಾಂಡಿತ್ಯವನ್ನು ಪಡೆದಿದ್ದರು. ಶಿಷ್ಯ ಸಂಪತ್ತನ್ನು ಗಳಿಸಿದ್ದರು. ಅಪಾರ ಆಸ್ತಿಕ ವೃಂದಕ್ಕೆ ಆರಾಧ್ಯ ದೈವರಾಗಿದ್ದರು. ಆಸಕ್ತ ಸಾಧಕರಿಗೆ ಶಾಂಕರಭಾಷ್ಯ ಸಮೇತ ಬ್ರಹ್ಮಸೂತ್ರ–ಉಪನಿಷತ್ತು–ಭಗವದ್ಗೀತೆಯೆಂಬ ಪ್ರಸ್ಥಾನತ್ರಯವನ್ನು ಕುರಿತಾಗಿ ಪಾಠ–ಪ್ರವಚನಾದಿಗಳನ್ನು ಬೋಧಿಸಿದರು. ಹಲವಾರು ಕ್ಷೇತ್ರದಿಂದ ಬರುತ್ತಿದ್ದ ವಿದ್ವಜ್ಜನಸಮೂಹವು ಅವರ ದರ್ಶನಾದಿಗಳನ್ನು ಪಡೆದು, ಶಾಸ್ತ್ರಗಳಲ್ಲಿ ಅವರಿಗೆ ತೋರಬಹುದಾದ ಸಂದೇಹಾದಿಗಳನ್ನು ನಿವಾರಿಸಿ ಕೊಳ್ಳುತ್ತಿದ್ದರು.

**‘‘ಉದಾರಚರಿತಾನಾಂ ತು ವಸುಧೈವಕುಟುಂಬಕಮ್’’**

ಉದಾರ ಚರಿತರಾದ ಮಹಾತ್ಮರಿಗೆ ಸಮಗ್ರಭುವನವೇ ಕುಟುಂಬವಾಗಿರುತ್ತದೆ.

ತದನುಸಾರವಾಗಿ ತಮ್ಮ ತಪಶ್ಚರ್ಯೆ–ಯೋಗಾಭ್ಯಾಸ–ಶ್ರವಣಾದಿಗಳಿಂದ ಪರಿಪಕ್ವವಾದ ಜ್ಞಾನ ಮತ್ತು ಲೋಕಾನುಭವವನ್ನು, ಭಕ್ತರ ಹಾಗೂ ಸಾಧಕರ ಉದ್ಧಾರಕ್ಕಾಗಿ ವಿನಿಯೋಗಿಸಿದರು. ಆಧ್ಯಾತ್ಮಿಕ ಸಾಧಕರ ಮತ್ತು ಮಹಾತ್ಮರ ಮನಸ್ಸನ್ನು ಮಾತ್ರವಲ್ಲದೇ, ಎಲ್ಲರ ಚಿತ್ತವನ್ನೂ ಸೂರೆಗೊಂಡರು. ಶಾಸ್ತ್ರಗಳಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಹೊಂದಿದ್ದ ಅವರನ್ನು ಪ್ರಕಾಂಡ ವಿದ್ವಾಂಸರೂ ವಿಸ್ಮಯದಿಂದ ಕಾಣುತ್ತಿದ್ದರು. ಅಚಲವಾದ ಬ್ರಹ್ಮನಿಷ್ಠೆಯನ್ನು ಹೊಂದಿದ್ದರೂ ಲೋಕ ನೀತಿಯನ್ನು ಬಲ್ಲವರಾಗಿದ್ದರು, ಲೌಕಿಕಜ್ಞರಾಗಿದ್ದರು. ಭಕ್ತಜನರೊಡನೆ, ಆಶ್ರಿತರೊಡನೆ ಮತ್ತಿತರೊಡನೆ ವ್ಯವಹರಿಸುವಾಗ ಆಸಕ್ತಿ, ಪ್ರಶಂಸೆ, ಕಾಳಜಿ, ಕೋಪ, ಕೌತುಕ ಮುಂತಾದವುಗಳನ್ನು, ಜನರ ಒಳಿತಿಗಾಗಿ ಪ್ರದರ್ಶಿಸುತ್ತಿದ್ದರು. ಈ ಸಂದರ್ಭದಲ್ಲಿ ವಸಿಷ್ಠ ಮಹರ್ಷಿಗಳು ಶ್ರೀರಾಮನಿಗೆ ಕೊಡುವ ಉಪದೇಶವು ಸ್ಮರಣೀಯವಾಗಿದೆ –

"ಓ ರಾಘವ! ನೀನು ಭವಿಷ್ಯಕ್ಕೆ ಸಂಬಂಧಪಟ್ಟ ಎಲ್ಲಾ ಆಸೆಗಳಿಂದಲೂ ದೂರವಾಗಿರುವೆ. ವರ್ತಮಾನಕ್ಕೆ ಯಾವುದಕ್ಕೂ ಅಂಟಿಕೊಂಡಿಲ್ಲ. ಹಿಂದಿನಿಂದ ಉಂಟಾದ ಯಾವ ವಾಸನೆಯೂ ಇಲ್ಲ. ಆದರೂ ಬಹಿರಂಗವಾಗಿ ಎಲ್ಲ ಆಚರಣೆಗಳಿಗೂ ಅನುಗುಣವಾಗಿ ಒಳಪಟ್ಟು ಲೋಕದಲ್ಲಿ ಸೂಕ್ತವಾಗಿ ಇತರರ ಪರಿಸ್ಥಿತಿಯನ್ನು ಮನಗಂಡು (ಲೋಕದಂತೆ) ನಡೆದುಕೋ".

**“ಅನ್ತಃ ಸನ್ತ್ಯಕ್ತಸರ್ವಶೋ ವೀತರಾಗೋ ವಿವಾಸನಃ।**

**ಬಹಿಃ ಸರ್ವಸಮಾಚಾರೋ ಲೋಕೇ ವಿಹರ ರಾಘವ ॥”**

**–[ಲಘು – ಯೋಗ – ವಾಸಿಷ್ಠ V.2.57]**

ಶ್ರೀ ಕೃಷ್ಣಯೋಗೀಂದ್ರರು, ಅಧ್ಯಾತ್ಮಶಾಸ್ತ್ರದ ಜೊತೆಗೆ ತಮ್ಮ ನಾಮಕ್ಕೆ ತಕ್ಕಂತೆ, ಅನ್ವರ್ಥವಾಗಿ ಯೋಗಶಾಸ್ತ್ರದಲ್ಲಿ ಸರ್ವಾಂಗೀಣ ಔನ್ನತ್ಯವನ್ನು ಸಾಧಿಸಿದ್ದರು.

“**ಲಂಬಿಕಾ**” ಎಂಬುದು ಯೋಗದ ಒಂದು ಪರಮೋತ್ಕರ್ಷವಾದ ಸಿದ್ಧಿ. ಯೋಗಸಾಧನೆಗಳಲ್ಲಿ ಇದು ಅತ್ಯಂತ ಕಠಿಣ. ಇದರಲ್ಲಿ ಸಿದ್ಧಿಯನ್ನು ಪಡೆದವರು ವಿರಳಾತಿವಿರಳ. ಮನಸ್ಸಿನ ವ್ಯಾಪಾರದ ನಿಯಂತ್ರಣವೇ ಯೋಗ. ಶರೀರದ ೬ ಅವಯುವಗಳನ್ನು ಹಾಗೂ ಮನಸ್ಸನ್ನು ಕ್ರಮಬದ್ಧ ಅಷ್ಟಾಂಗ ಯೋಗಾಸನ ಮತ್ತು ಪ್ರಾಣಾಯಾಮಗಳಿಂದ ಶಿಸ್ತಿಗೆ ಒಳಪಡಿಸಿದಾಗ ದೇಹವು ಅಪೂರ್ವ ಕಾಂತಿಯಿಂದ ಕಂಗೊಳಿಸಿ ವಜ್ರದಷ್ಟು ದೃಢವಾಗುತ್ತದೆ. ಪಾಂಚಭೌತಿಕ ಸ್ವರೂಪವು (ಶರೀರವು) ಲಯವಾಗಿ, ಕೇವಲ ಜ್ಯೋತಿಃ ಸ್ವರೂಪವನ್ನು ಪಡೆಯುತ್ತದೆ. ಇದಕ್ಕೆ ಪೂರ್ವನಿದರ್ಶನವಾಗಿ, ಶ್ರೀ ಶೃಂಗೇರೀ ಶಾರದಾ ಪೀಠದ ಹತ್ತನೇ ಜಗದ್ಗುರುಗಳಾದ ಮಹಾಯೋಗಿಗಳಾದ ಶ್ರೀ ಶ್ರೀ ಶ್ರೀ ವಿದ್ಯಾತೀರ್ಥರು, ಲಂಬಿಕಾಯೋಗದಲ್ಲಿ ನಿಷ್ಣಾತರಾಗಿದ್ದರು. ಇವರ ಶಿಷ್ಯರೇ ಶ್ರೀ ಶ್ರೀ ಶ್ರೀ ಭಾರತೀ ತೀರ್ಥರು ಮತ್ತು ಶ್ರೀ ಶ್ರೀ ಶ್ರೀ ವಿದ್ಯಾರಣ್ಯರು. ಕಾಂಚೀ ಪೀಠದ ೩೨ನೇ ಗುರುಗಳಾದ ಶ್ರೀ ಶ್ರೀ ಶ್ರೀ ಚಿದಾನಂದಘನೇಂದ್ರ ಸರಸ್ವತೀಗಳವರೂ

ಕೂಡಾ ಲಂಬಿಕಾಯೋಗದಲ್ಲಿ ನಿಷ್ಣಾತರಾಗಿದ್ದರು ಎಂದು ಅವರ ಧ್ಯಾನಶ್ಲೋಕದಿಂದ ತಿಳಿದು ಬರುತ್ತದೆ.

ಲಂಬಿಕಾ ಯೋಗದಲ್ಲಿ ನಾಲಿಗೆಯನ್ನು ಹಿಮ್ಮುಖವಾಗಿ ಒಳಕ್ಕೆ ಮಡಚಿ, ಕಂಠದತ್ತ ಚಾಚುತ್ತಾ ಎಳೆದುಕೊಂಡು, ಗಂಟಲಿನಲ್ಲಿರುವ ಕಿರುನಾಲಿಗೆಗಿಂತಲೂ ಹಿಂದಕ್ಕೆ ತರಬೇಕು. ಅಲ್ಲಿ ಬಲ–ಎಡ ಭಾಗಗಳೆರಡರಲ್ಲಿ ಶ್ವಾಸ ರಂಧ್ರಗಳಿರುತ್ತವೆ. ಅವನ್ನು ನಿಯಂತ್ರಿಸಿ (ಅಂದರೆ ಮುಚ್ಚಿ) ಶ್ವಾಸವನ್ನು ತಡೆಯಲಾಗುತ್ತದೆ, ನಿರೋಧಿಸಲಾಗುತ್ತದೆ. ಇದರ ಅಭ್ಯಾಸದಿಂದ ಯೋಗದರ್ಶನದಂತೆ, ಯೋಗಿಯು ಜರಾಮರಣಗಳನ್ನು ಗೆಲ್ಲುತ್ತಾನೆ. ತನಗೆ ಬೇಕಾದ ರೂಪದಲ್ಲಿ ಶರೀರವನ್ನು ಮಾರ್ಪಡಿಸಿಕೊಳ್ಳುತ್ತಾನೆ. ಯಾವಾಗ ಯೋಗಿಯು ಈ ಯೋಗದಲ್ಲಿ ಆಸಕ್ತನಾಗುವನೋ, **ಅವನ ಶರೀರದಲ್ಲಿರುವ ಜೀವಕಣಗಳು ಆತನ ಸಂಕಲ್ಪಕ್ಕೆ ಅನುಸಾರವಾಗಿ ಸ್ಪಂದಿಸಿ ಮಾರ್ಪಾಟುಗಳಾಗಲು ಶಕ್ತವಾಗುತ್ತವೆ.** ಇಷ್ಟೇ ಅಲ್ಲದೆ ಆ ಯೋಗಿಯ ಪ್ರಭಾವವು ಪರಿಸರದ ಮೇಲೂ, ಜೀವರಾಶಿಯ ಮೇಲೂ ಪರಿಣಾಮ ಬೀರುತ್ತದೆ. ಅಂಥಹ ಮಹಾಯೋಗಿಯು, ತಾನು ಅಪೇಕ್ಷೆಪಟ್ಟರೆ ಎಷ್ಟು ಕಾಲದವರೆಗಾದರೂ ತನ್ನ ಶರೀರವನ್ನು ರಕ್ಷಿಸಿಡಬಲ್ಲನು. ಸಾಧಕರಿಗೂ ಮಾರ್ಗದರ್ಶಿಯಾಗಿ ಅವರ ಗುರಿಗಳನ್ನು ಮುಟ್ಟಿಸುತ್ತಾನೆ.

## ಸಂನ್ಯಾಸ ಸ್ವೀಕಾರ

ಶ್ರೀ ಕೃಷ್ಣಯೋಗೀಂದ್ರರು ಸಂನ್ಯಾಸಸ್ವೀಕಾರ ಧರ್ಮವನ್ನು ವಿಧಿವತ್ತಾಗಿ ಆಚರಿಸಿದರು. ಕೌಪೀನ–ಕಟಿಸೂತ್ರ–ದಂಡ–ಕಮಂಡಲು–ಪಾದುಕೆ–

ಕಾಷಾಯವಸ್ತ್ರಾದಿಗಳನ್ನು ಗುರುಗಳಿಂದ ಸ್ವೀಕರಿಸಿ, ಧರಿಸಿ, ಮಹಾವಾಕ್ಯೋಪದೇಶವನ್ನು ಪಡೆದರು. ತಾವು ಗಳಿಸಿದ್ದ ಮಹತ್ತಾದ ತಪಃಶಕ್ತಿಯನ್ನು ಭಕ್ತರ ಸರ್ವಾಂಗೀಣ ಉನ್ನತಿಗಾಗಿ ತ್ಯಾಗಮಾಡಿ ವೈರಾಗ್ಯ ಪ್ರಭುಗಳೆನಿಸಿದರು. ಸಂನ್ಯಾಸ ಸ್ವೀಕಾರದ ನಂತರ – ಅತೀಂದ್ರಿಯ ಜ್ಞಾನಸಂಪನ್ನರಾಗಿ, ಗುರುವಾಗಿ ಪ್ರಕಟವಾಗಿ (ಬಾಣಾವರದಲ್ಲಿ ವಾಸ್ತವ್ಯ ಹೂಡಿ, ಅಲ್ಲಿ ನೆಲೆನಿಂತು) ತಮ್ಮ ಅಲೌಕಿಕ ಸಾಧನೆಯ ಜಗತ್ತಿನ ಅನುಭವಗಳನ್ನು ನಾಡಿನಾದ್ಯಂತ ಬೆಳಗಿದರು. ಜಗತ್ತು ಜಗತ್ತಾಗಿ ಅವರಿಗೆ ತೋರಲಿಲ್ಲ. ಅದೂ ಬ್ರಹ್ಮವೇ. ಅಂದರೆ ನಿಜವಾದ ಜ್ಞಾನಿಯು ಜಗತ್ತನ್ನು ಗುರುರೂಪವಾಗಿ ಭಾವಿಸುತ್ತಾನೆ. ಪ್ರಪಂಚವೂ ಬ್ರಹ್ಮಸ್ವರೂಪ.

ಈ ಸಮಯದಲ್ಲಿ ಅವರ ಮಾತೃಶ್ರೀಯವರು ವೃದ್ಧರಾಗಿದ್ದರು. ಅವರ ಬಹುದಿನಗಳ ಅಪೇಕ್ಷೆಯ ಮೇರೆಗೆ ಅವರ ತಾಯಿಗೆ ತಮ್ಮ ಲೀಲೆಯ ಮೂಲಕ ದಿವ್ಯ ದೃಷ್ಟಿಯನ್ನು ಅನುಗ್ರಹಿಸಿ, ಕಾಶೀವಿಶ್ವನಾಥನ ದರ್ಶನವನ್ನು ತಮ್ಮ ಮನೆಯ ಪೂಜಾಮಂದಿರದಲ್ಲೇ ಮಾಡಿಸಿದರು. ಅಲ್ಲಿಯೇ ದೇವಮಂದಿರದಲ್ಲಿದ್ದ ಗಂಗಾಕರಂಡಕ (ತಾಲಿ) ದಿಂದಲೂ ಗಂಗೆಯನ್ನು ಆವಾಹಿಸಿ, ಗೋಡೆಯ ಮೂಲಕ ಗಂಗೆಯನ್ನು ಹರಿಸಿ ತಮ್ಮ ತಾಯಿಯು ಗಂಗಾಸ್ನಾನವನ್ನು ಮಾಡುವಂತೆ ಮಾಡಿದರು. "ಮಾತೃದೇವೋ–ಭವ" ಎಂಬ ಉಪನಿಷದುಕ್ತಿಯನ್ನು ತ್ರಿಕರಣಪೂರ್ವಕವಾಗಿ ಆಚರಿಸಿ, ಜನ್ಮ ಸಾಫಲ್ಯತೆಯನ್ನು ಪಡೆದರು. ಮಾತೃಸೇವೆಯನ್ನು ಅಹರ್ನಿಶಿ ಮಾಡಿದರು. ಅವರ ಅಪೇಕ್ಷೆಯಂತೆ, ತಮ್ಮ ಮನೆಯಲ್ಲೇ ಭಾಗೀರಥಿಯನ್ನು ಹರಿಸಿ, ತಾಯಿಯವರು ಪುನೀತರಾದರಷ್ಟೇ.

ಜಗದ್ಗುರು ಶ್ರೀ ಶಂಕರ ಭಗವತ್ಪಾದಾಚಾರ್ಯರು ವಯಸ್ಸಹಜವಾಗಿ ಮಂದಗತಿಯುಳ್ಳ ತಮ್ಮ **ಮಾತೃಶ್ರೀ ಆರ್ಯಾಂಬಾರವರಿಗೆ,** ಹೇಗೆ ಪೂರ್ಣಾ ನದಿಯನ್ನು, ತಾಯಿಯವರ ಸ್ನಾನಕ್ಕಾಗಿ ಅನುಕೂಲವಾಗಿ ಹರಿಯಲೆಂದು ಪ್ರಾರ್ಥಿಸಿದ್ದರೋ ಅದೇ ರೀತಿ ಶ್ರೀ ಕೃಷ್ಣಯೋಗೀಂದ್ರರು ಸಹ, ಮಾತೃಸೇವೆ ಎಂಬ ಒರೆಗಲ್ಲಿನ ಮೇಲೆ ಉಜ್ಜಲ್ಪಟ್ಟು ಪವಿತ್ರಾತ್ಮರಾದರು. ತಾಯಿಯವರ ಪ್ರಾರ್ಥನಾನುಸಾರವಾಗಿ ಅವರ ಹೃದಯದ ಗಂಟುಗಳನ್ನು (ಅಂದರೆ ಸಂಸಾರಬಂಧವನ್ನು) ಕಳಚುವಂತೆ ಮಾಡಿ ತಾರಕನಾಮವನ್ನು ಉಪದೇಶಿಸಿ ಕೃತಾರ್ಥರನ್ನಾಗಿ ಮಾಡಿ ಮೋಕ್ಷವನ್ನು ಕರುಣಿಸಿದರು. ಪ್ರತಿಯೊಬ್ಬ ಜೀವಿಯೂ ಭೂಮಿಗೆ ಬಂದು, ಮಾನವಶರೀರವನ್ನು ಧರಿಸುವುದು ತನ್ನ ನೈಜಸ್ವರೂಪವನ್ನು ತಿಳಿಯಲು ಹಾಗೂ ಆ ದಿಕ್ಕಿನ ಕಡೆ ಪ್ರಯಾಣಮಾಡುವುದಕ್ಕಾಗಿ. ಆದರೆ ಮಾನವತೆಯನ್ನು ಪಡೆದ ಬಳಿಕ ತಮ್ಮ ಪಯಣದ ಗುರಿಯನ್ನು ಮರೆಯದೆ ಮುನ್ನಡೆಯುವವರು ಶ್ರೀ ಕೃಷ್ಣಯೋಗೀಂದ್ರರಂತೆ ಎಲ್ಲೋ ಕೆಲವರು ಮಾತ್ರ!

ಏತಾದೃಶ ದೃಷ್ಟಾಂತಗಳು ಅವರ ಕರ್ಮಯೋಗದ ಸಿದ್ಧಿಗಳ ವಿಷಯವಾಗಿದ್ದು ಆತ್ಮಜ್ಞಾನದಿಂದ, ತೋರಿಕೊಂಡ ಮಹಿಮೆಗಳಾಗಿರಬಹುದು. ಇದರ ಸಮರ್ಥನೆಯನ್ನು "ಮುಂಡಕೋಪನಿಷತ್ತಿನ" ಶ್ರೀ ಶಂಕರ ಭಗವತ್ಪಾದಾಚಾರ್ಯರ ಭಾಷ್ಯದಲ್ಲಿ ಕಾಣಬಹುದು (3-1-10).

**"ಆತ್ಮವಿತ್ ನಿರ್ಮಲಾನ್ತಃಕರಣಃ ಯಾಂಶ್ಚ ಕಾಮಾನ್ ಪ್ರಾರ್ಥಯತೇ, ... ತಂ ತಂ ಲೋಕಂ ಪ್ರಾಪ್ನೋತಿ. ತಸ್ಮಾತ್ ಭೂತಿಕಾಮಃ (ವಿಭೂತಿಮ್ ಇಚ್ಛುಃ) ಆತ್ಮಜ್ಞಂ ಆತ್ಮಜ್ಞಾನೇನ ವಿಶುದ್ಧಾಂತಃ ಕರಣಂ ಹಿ ಅರ್ಚಯೇತ್"**

ಆತ್ಮನನ್ನು ಅರಿತುಕೊಂಡವನು ಸತ್ಯಕಾಮನೂ ಸತ್ಯಸಂಕಲ್ಪನೂ ಶುದ್ಧವಾದ ಅಂತಃಕರಣವುಳ್ಳವನೂ ಆಗಿರುತ್ತಾನೆ. ಆದ್ದರಿಂದ ಒಳ್ಳೆಯದನ್ನು ಬಯಸುವ ಭಕ್ತರು, ಅವನನ್ನು (ಆತ್ಮಜ್ಞಾನಿಯನ್ನು – ಪಾದಪ್ರಕ್ಷಾಳನ – ಶುಶ್ರೂಷಾ – ನಮಸ್ಕಾರಾದಿಭಿಃ ...) ಪೂಜಿಸಿದರೆ, ಅವರ ಇಷ್ಟಾರ್ಥಗಳು ನೆರವೇರುವುದು.

**"ತಸ್ಮಾದ್ ಆತ್ಮಜ್ಞಂ ಹ್ಯರ್ಚಯೇದ್ ಭೂತಿಕಾಮಃ"**

ಆತ್ಮಜ್ಞಾನಿಯ ತಪೋಮಹಿಮೆಯಿಂದ ಭಕ್ತರಿಗೆ ವಿವಿಧೈಶ್ವರ್ಯಗಳು ಉಂಟಾಗುತ್ತವೆ ಎಂದು ಸ್ಪಷ್ಟಪಡಿಸಿದ್ದಾರೆ.

ಈ ಪ್ರಕಾರ ಶ್ರೀ ಕೃಷ್ಣಯೋಗೀಂದ್ರರು ಸರಿ ಸುಮಾರು ೪೮–೫೦ರ ವರ್ಷಪ್ರಾಯದಲ್ಲಿ ಸಿದ್ಧಪುರುಷರಾದ ಸದ್ಗುರುಗಳಾಗಿ ಜಗತ್ತಿಗೆ ಪ್ರಕಟವಾದರು.

ತಮ್ಮ ತಾಯಿಯವರ ಮೋಕ್ಷಪ್ರಾಪ್ತಿಯ ನಂತರ, ಸರ್ವಕರ್ಮ ಸಂನ್ಯಾಸಪೂರ್ವಕವಾಗಿ ತುರೀಯಾಶ್ರಮವನ್ನು ಸ್ವೀಕರಿಸಿದರಷ್ಟೆ. ವೇದಾಗಮಗಳೆಲ್ಲವೂ ಅಂತರ್ಗತವಾಗಿರುವ ಪ್ರಣವದಲ್ಲಿ ಜಪಾಸಕ್ತರಾದರು. ಈ ಪ್ರಣವದಲ್ಲೇ ಗಾಯತ್ರೀ ವ್ಯಾಹೃತಿಗಳು ಅಡಕವಾಗಿವೆ. ಈ ಪ್ರಣವದ ('ॐ'ಕಾರದ) ಮೂಲತತ್ತ್ವವೇ ಪರಮಾತ್ಮ.

ಮಹಾತ್ಮನು ತನ್ನ ಸ್ವರೂಪವನ್ನು ಅದರಲ್ಲಿ ಪ್ರವೇಶಮಾಡಿಸುತ್ತಾನೆ. ಅವನೇ ವೇದ ಸ್ವರೂಪವಾಗುತ್ತಾನೆ. ಏಕೆಂದರೆ ಸಂನ್ಯಾಸಶಬ್ದಕ್ಕೆ "ಸಮ್ಯಗ್ದರ್ಶನ" ವೆಂದೇ ಅರ್ಥ. ಚಿತ್ತಶುದ್ಧಿಯ ಕಾರಣ ವಿಧಿ-ನಿಷೇಧ ರೂಪವಾದ ಯಾವ ಕರ್ಮವೂ ತನ್ನ ಆತ್ಮನಲ್ಲಿಲ್ಲ. ಇದೇ ನಿಜವಾದ ಕರ್ಮ ಸಂನ್ಯಾಸ. ಇಂಥ "ನೈಷ್ಕರ್ಮ್ಯಸಿದ್ಧಿ" ಯನ್ನು ಪಡೆದ ಶ್ರೀ ಕೃಷ್ಣಯೋಗೀಂದ್ರರು ಜನರಿಗೆ ಸನ್ಮಾರ್ಗಕ್ಕೆ ಆದರ್ಶಪ್ರಾಯರಾಗಿದ್ದುಕೊಂಡು "ಆತ್ಮೈವೇದಂ-ಸರ್ವಮ್", "ಅಹಂ ಬ್ರಹ್ಮಾಸ್ಮಿ" ಮುಂತಾದ ವೇದಾಂತ ವಾಕ್ಯಗಳ ಅರ್ಥವನ್ನು ಮನಸ್ಸಿನಲ್ಲಿ ಹೋರಳಾಡಿಸುತ್ತಾ ನಿತ್ಯ ಸಿದ್ಧವಾದ ಪರಬ್ರಹ್ಮರೂಪವಾಗಿದ್ದರು.

ತಪೋಮೂರ್ತಿ ಶ್ರೀ ಕೃಷ್ಣಯೋಗೀಂದ್ರರ ಅನುಶಾಸನವನ್ನು ಅಂದಿನ ನವನಾಯಕರೆನಿಸಿದ ಪಾಳೆಯಗಾರರೂ ಶಿರಸಾವಹಿಸಿ ತ್ರಿಕರಣಪೂರ್ವಕವಾಗಿ ಸಹಕಾರ ಕೊಟ್ಟಿದ್ದರು. ಇದರ ಪರಿಣಾಮವಾಗಿ ಅರಸೀಕೆರೆಯಲ್ಲಿರುವ, ಬೆಟ್ಟದ ತುದಿಯಲ್ಲಿ ನೆಲಸಿರುವ ಮಾಲೇಕಲ್ಲು ಶ್ರೀ ಶ್ರೀನಿವಾಸನ ದೇವಸ್ಥಾನವನ್ನು ಪರಕೀಯರ (ಮ್ಲೇಚ್ಛರ) ಹಾವಳಿಯಿಂದ ಸಂರಕ್ಷಿಸಿ ಮೂಲಮೂರ್ತಿಗೆ ನಿತ್ಯೋತ್ಸವ, ತೆಪ್ಪೋತ್ಸವಾದಿಗಳ ಜೊತೆಗೆ ವಾರ್ಷಿಕ ರಥೋತ್ಸವಾದಿಗಳನ್ನು ಆಚರಣೆಗೆ ತಂದು ಸಹಸ್ರಾಧಿಕ ಭಕ್ತ ಸಮೂಹಕ್ಕೆ ನೆಮ್ಮದಿಯನ್ನು ಕರುಣಿಸಿದ್ದಾರೆ.

## ಪಾದುಕಾಸಿದ್ಧಿ

ಶ್ರೀ ಕೃಷ್ಣಯೋಗೀಂದ್ರರು ಶ್ರೀಕೃಷ್ಣನ ಔಪಾಸಕರಾಗಿದ್ದು, ಸ್ವತಃ ತಮ್ಮ ಇಷ್ಟದೇವರೂ, ಕುಲದೇವರೂ ಆದ ಮಾಲೇಕಲ್ಲು ತಿರುಪತಿಯ

ವೇಂಕಟೇಶ್ವರನ ಸನ್ನಿಧಿಯಲ್ಲಿ ಅದೃಶ್ಯರೂಪದಲ್ಲಿ ಬೆಟ್ಟದ ಮೇಲಿನ ವೇಂಕಟೇಶನ ಸನ್ನಿಧಿಯಲ್ಲಿ ಹಾಗೂ ಬೆಟ್ಟದ ತಪ್ಪಲಿನಲ್ಲಿರುವ ವೇಂಕಟೇಶನ ಸನ್ನಿಧಿಯಲ್ಲಿ ಏಕಕಾಲದಲ್ಲಿ ಪ್ರತಿನಿತ್ಯ ಆಶ್ಚರ್ಯಕರ ರೀತಿಯಿಂದ ಪೂಜೆಗೈಯ್ಯುತ್ತಿದ್ದರು. ಒಮ್ಮೆ ಬೆಟ್ಟದ ಮೇಲಿನ ಮೂಲ ಸನ್ನಿಧಿಯಲ್ಲಿ ಮತ್ತು ತಪ್ಪಲಿನಲ್ಲಿರುವ ಅದೇ ದೇವರ ಸನ್ನಿಧಿಯಲ್ಲಿ ಏಕ ಕಾಲದಲ್ಲಿ ಪೂಜೆಯಾದ ಸಂದರ್ಭವು ಅಲ್ಲಿನ ಅರ್ಚಕರಿಗೆ ಗೋಚರವಾಯಿತು. ಹೊಚ್ಚ ಹೊಸದಾದ ಹೂಮಾಲೆ, ಧೂಪ–ದೀಪ–ಅಗರುಗಳ ಕಂಪುವಾಸನೆ, ನೈವೇದ್ಯಾದಿ ಪರಿಕರಗಳನ್ನು ನೋಡಿದ ಅರ್ಚಕರು, ತಾವು ದೇಗುಲಕ್ಕೆ ಬೀಗ ಹಾಕಿದ್ದರೂ, ಯಾರೋ ಮಹಾತ್ಮರು ತಮ್ಮ ಅಲೌಕಿಕ ಪ್ರಭಾವದಿಂದ ಪೂಜೆ ಮಾಡಿರಬಹುದೆಂದು ತರ್ಕಿಸಿ, ಪುಣ್ಯವಶದಿಂದ ಅದನ್ನು ಸಾಕ್ಷಾತ್ತಾಗಿ ನೋಡಲು ಬಯಸಿ, ಮರುದಿನ ಬ್ರಾಹ್ಮೀಮುಹೂರ್ತದಲ್ಲೇ ಬಂದು ಬೀಗ ತೆಗೆದು ನೋಡಲಾಗಿ, ಅವರ ಕಣ್ಣುಗಳನ್ನು ಅವರೇ ನಂಬಲ್ಲಿಲ್ಲ, ತಮ್ಮ ಭಾಗ್ಯದೇವತೆಯಂತಿದ್ದ ಶ್ರೀ ಕೃಷ್ಣಯೋಗೀಂದ್ರರು, ಸ್ವಾಮಿಯ ಸನ್ನಿಧಿಯಲ್ಲಿ ಅರ್ಚಕರು ಬಾಗಿಲನ್ನು ತೆರೆಯದಿದ್ದರೂ, ಒಳಗೆ ಪ್ರವೇಶಿಸಿ, ಅರ್ಚಕರು ಬರುವುದಕ್ಕಿಂತ ಮೊದಲೇ ನೈವೇದ್ಯಾದಿಗಳನ್ನು ಸಲ್ಲಿಸಿ ಧ್ಯಾನಾಸಕ್ತರಾಗಿದ್ದರು.

ಶ್ರೀ ಕೃಷ್ಣಯೋಗೀಂದ್ರರು ಪಾದುಕಾ ಸಿದ್ಧಿಯನ್ನು ಹೊಂದಿದ್ದರು. ಏಕಕಾಲದಲ್ಲಿ ತಮ್ಮ ಭಕ್ತಾದಿಗಳಿಗೆ ಎರಡು ಮತ್ತು ಮೂರು ಕಡೆಗಳಲ್ಲಿ ದರ್ಶನ ಕೊಡುತ್ತಿದ್ದರು. ಇಂದಿಗೂ ಶ್ರೀಗಳ ವಂಶಜರಲ್ಲಿ ಹಾಗೂ ಭಕ್ತಾದಿಗಳಲ್ಲಿ ಈ ನಂಬಿಕೆ ಮತ್ತು ಪ್ರತೀತಿ ಇದೆ.

## ಸೋಪಾನ ಪರಂಪರೆ

ಅಂದಿನ ದಿನಗಳಲ್ಲಿ ಬೆಟ್ಟದ ಮೇಲಿನ ದೇವರ ಮೂಲಮೂರ್ತಿಯ ದರ್ಶನಕ್ಕೆ, ಬೆಟ್ಟಕ್ಕೇರುವ ವ್ಯವಸ್ಥೆ ಇಲ್ಲದೇ ಇರುವ ಕಾರಣದಿಂದ ಹಾಗೂ ಭಕ್ತ ವರ್ಗದ ಪ್ರಾರ್ಥನಾನುಸಾರವಾಗಿ, ಬೆಟ್ಟಕ್ಕೆ ಮೆಟ್ಟಿಲುಗಳನ್ನು ನಿರ್ಮಿಸುವ ಸದ್ದುದ್ದೇಶದಿಂದ ಒಂದು ತುಳಸೀ ಮಾಲೆಯನ್ನು ಅಭಿಮಂತ್ರಿಸಿ ತುಳಸೀ ಮಾಲೆಯ ರೀತಿಯಲ್ಲಿ ಮೆಟ್ಟಲುಗಳು ಮೂಡಲಿ ಎಂದು ಅನುಗ್ರಹಿಸಿದರು.  ಈ ಎಲ್ಲಾ ಕಾರಣಗಳಿಂದ ಇಂದಿಗೂ ಅರಸೀಕೆರೆಯ ಮಾಲೇಕಲ್ಲು ತಿರುಪತಿಯ ಶ್ರೀವೇಂಕಟೇಶ್ವರ ರಥೋತ್ಸವದ ಸಮಯದಲ್ಲಿ, ಕೃತಜ್ಞತೆಯ ಕುರುಹಾಗಿ ಶ್ರೀ ಕೃಷ್ಣಯೋಗೀಂದ್ರರ ಹೆಸರಿನಲ್ಲಿ ಅಗ್ರಪೂಜೆಯು ನೆರವೇರುತ್ತದೆ, ಹಾಗೂ ಅವರ ವಂಶದವರೇ ಮೊದಲಿಗೆ ರಥೋತ್ಸವದ ಸಂದರ್ಭದಲ್ಲಿ ಅಗ್ರಪೂಜೆಯನ್ನು ಸಲ್ಲಿಸುತ್ತಾರೆ.  ಈ ಮಾಹಿತಿಯನ್ನು ಇಂದಿಗೂ ಸಹ ಮಾಲೇಕಲ್ಲು ಬೆಟ್ಟದ ಅರ್ಚಕರ ಮೂಲಕ ತಿಳಿದುಕೊಳ್ಳಬಹುದು.

## ಜಯಂತಿ ಮತ್ತು ಆರಾಧನೆ

ಗುರುಗಳ ಶ್ರೀಜನ್ಮ (ಜಯಂತಿ) ದಿವಸದಲ್ಲಿ ಮತ್ತು ಆರಾಧನಾ ಮಹೋತ್ಸವದಲ್ಲಿ, ಅವರ ಧ್ಯಾನ-ಪೂಜೆ-ಪಾರಾಯಣ-ಭಜನೆ-ಕಥಾಚರಿತ್ರ-ಸಂಕೀರ್ತನೆ ಮುಂತಾವುಗಳನ್ನು ಶ್ರೀರಾಮನವಮಿ, ಶ್ರೀಕೃಷ್ಣಜನ್ಮಾಷ್ಟಮಿ, ಶಿವರಾತ್ರಿ ಹಬ್ಬಹರಿದಿಗಳಂತೆಯೇ ವಿಶೇಷವಾದ ಶ್ರದ್ಧಾಭಕ್ತಿಯಿಂದ ಆಚರಿಸಲ್ಪಡುತ್ತದೆ.

ಗುರು, ಶಿಷ್ಯರಿಗೆ ಉಪನಯನಮಾಡಿಸಿ ವೇದ–ಶಾಸ್ತ್ರಾರ್ಥಗಳನ್ನು ಬೋಧಿಸಿ, ಸದಾಚಾರದಲ್ಲಿ ಶಿಷ್ಯರನ್ನು ಸ್ಥಾಪಿಸಿ, ತಾನೂ ಶಾಸ್ತ್ರಮಾರ್ಗದಲ್ಲಿ ನಡೆಯುತ್ತಾನೆ. ಆತ್ಮಜ್ಞಾನಸಂಪನ್ನನಾಗಿ ಶಿಷ್ಯರಲ್ಲಿ ಆತ್ಮಶಕ್ತಿಯನ್ನು ಸಂಕ್ರಮಣಮಾಡಿಸಿ ಜ್ಞಾನಾನಂದವನ್ನು ಕರುಣಿಸುತ್ತಾನೆ. ಅಂದರೆ ಪರಬ್ರಹ್ಮವನ್ನು ಸಾಕ್ಷಾತ್ತಾಗಿ ಅನುಭವಿಸಿ ಶಿಷ್ಯರಿಗೂ ಅದನ್ನು ಕರುಣಿಸುತ್ತಾನೆ. ಇಂಥಹ ಮಹಾತ್ಮರನ್ನು ಸಾಕ್ಷಾತ್ ಭಗವಂತನೆಂದೇ ಭಾವಿಸಿ, ಅವರ ಜನ್ಮತಿಥಿ, ಆರಾಧನಾ ಮಹೋತ್ಸವಾದಿಗಳನ್ನು ಮಂಗಳತಮ ಮತ್ತು ಪುಣ್ಯತಮ ದಿನಗಳೆಂದು ತಿಳಿದು, ಅವನ್ನು ಉತ್ಸವರೂಪದಲ್ಲಿ ಆಚರಿಸಲ್ಪಡುವುದೂ ಸಹಜವಾಗಿದೆ. ಶ್ರೀಮದಾಚಾರ್ಯರ ಜನ್ಮಮಂಗಳದ ದಿನವನ್ನು ವರ್ಧಂತಿ, ಜಯಂತಿ ಎಂಬ ಶಬ್ದಗಳಿಂದ ಕರೆಯುತ್ತಾರೆ. ವರ್ಧಂತಿಯನ್ನು "**ವರ್ಧಾಪನ ಮಹೋತ್ಸವ**" ಎಂದು ಕರೆಯುವುದುಂಟು. ಆಚಾರ್ಯರ/ಗುರುಗಳ ಜನ್ಮ ನಕ್ಷತ್ರ–ಜನ್ಮತಿಥಿ ಎರಡೂ ಕೂಡಿಬರುವುದೂ ಅತ್ಯಂತ ಶ್ರೇಷ್ಠ. ತಮಿಳುನಾಡಿನಲ್ಲಿ ಜನ್ಮ ನಕ್ಷತ್ರಕ್ಕೂ, ಉಳಿದ ಕಡೆಗಳಲ್ಲಿ ಜನ್ಮ ತಿಥಿಗೂ ಪ್ರಾಧಾನ್ಯತೆಯನ್ನು ಕೊಡುವ ರೂಢಿಯಿದೆ. ಮತ್ತೆ ಕೆಲವಡೆ ಜನ್ಮನಕ್ಷತ್ರವು ಕೂಡಿಬಂದ ದಿವಸವನ್ನು ತಿರುನಕ್ಷತ್ರವೆಂದು ಕರೆದು ಉತ್ಸವವನ್ನು ಆಚರಿಸುತ್ತಾರೆ. ಉತ್ಸವಾದಿಗಳ ಮೂಲಕ ಶ್ರೀಗುರುಗಳ ಜೀವನ, ಸಂದೇಶ ಮತ್ತು ಕೃತಿಗಳಿಂದ ಎಲ್ಲರೂ ಸ್ಫೂರ್ತಿಯನ್ನು ಪಡೆಯಬಹುದು.

**ಮಹಾಸಮಾಧಿ**

ಶ್ರೀ ಕೃಷ್ಣಯೋಗಿಂದ್ರರು ತಮ್ಮ ೬೨ನೇ ವಯಸ್ಸಿನಲ್ಲಿ ಬಾಣಾವರದ ಹುಳಿಯಾರು ರಸ್ತೆಯ ಹೊಸಕೆರೆಯ ಏರಿಯ ಪಕ್ಕದಲ್ಲಿ ಜೀವಂತವಾಗಿ ಬೃಂದಾವನ ಪ್ರವೇಶವನ್ನು ಮಾಡಿದರು. **ಮಹಾಸಮಾಧಿಯು ಕಾರ್ತಿಕ ಮಾಸದ ಉತ್ಥಾನದ್ವಾದಶಿಯ ದಿನ**ದಂದು ನೆರವೇರಿದೆ. ಇಂದಿಗೂ ಕೂಡ ಪ್ರತೀ ವರ್ಷ ಈ ಪವಿತ್ರವಾದ ದಿನದಂದು ಶ್ರೀಗಳ ಭಕ್ತಾದಿಗಳಿಂದ ಜಾತಿ, ಮತ, ಧರ್ಮ, ಭೇದವಿಲ್ಲದೆ ಶ್ರೀಗುರುಗಳ ಆರಾಧನಾ ಮಹೋತ್ಸವವು ಬಹಳ ಶ್ರದ್ಧಾಭಕ್ತಿಯಿಂದ ನಡೆಯುತ್ತಿದೆ.

ಇಂದಿಗೂ ಸಹ ಶ್ರೀ ಕೃಷ್ಣಯೋಗೀಂದ್ರರ ಸಮಾಧಿಯ ಸ್ಥಳದಲ್ಲಿ ಭಕ್ತಿ, ಶ್ರದ್ಧೆ, ನಿಷ್ಠೆಯಿಂದ ಸೇವೆ ಮಾಡಿದರೆ, ಅವರವರ ಮನಸ್ಸಿನ ಅನುಗುಣವಾಗಿ ಶ್ರೀಗುರುಗಳ ಲೀಲೆಯು ಅನುಭವವಾಗುತ್ತದೆ. ಈ ಸ್ಥಳವು ಈ ನಾಡಿನ ಅನೇಕ ಯತಿವರ್ಯರಿಗೂ, ಸಾಧು ಸಂತರಿಗೂ ಜಾತಿ, ಮತ, ಧರ್ಮ ಭೇದವಿಲ್ಲದೇ ಆಧ್ಯಾತ್ಮಿಕ ಅನುಭೂತಿಯ ಕೇಂದ್ರವಾಗಿ ಹೊರಹೊಮ್ಮಿದೆ. ಶ್ರೀಗುರುಗಳ ಸಮಾಧಿಯಲ್ಲಿ ನಿತ್ಯ ಪೂಜೆಯು ನಡೆಯುತ್ತಿದೆ. ದ್ವಾದಶಿ ಹಾಗೂ ಪೌರ್ಣಮಿಯ ದಿನದಂದು ವಿಶೇಷ ಪೂಜೆಯು ನಡೆಯುತ್ತದೆ. ಶ್ರೀಗುರುಗಳ ಸನ್ನಿಧಿಯಲ್ಲಿ ಹಬ್ಬ ಹರಿದಿನಗಳಲ್ಲಿ ಧಾರ್ಮಿಕ ಕಾರ್ಯಗಳು ಮತ್ತು ಲೋಕಕಲ್ಯಾಣ ಕಾರ್ಯಕ್ರಮಗಳು ಇಂದಿಗೂ ನಡೆಯುತ್ತಿವೆ ಹಾಗೂ ಲೋಕ ಕಲ್ಯಾಣಾರ್ಥವಾಗಿ ಹವನ, ಹೋಮಗಳು ಸಹ ನಡೆಯುತ್ತಿರುತ್ತವೆ.

ಶ್ರೀ ಕೃಷ್ಣಯೋಗೀಂದ್ರ ಸರಸ್ವತೀ ಪರಮಹಂಸರ ಪಾದುಕೆ ಹಾಗೂ ಪೂಜ್ಯರು ಪೂಜೆಗೈಯ್ಯುತ್ತಿದ್ದ ಶ್ರೀಕೃಷ್ಣನ ವಿಗ್ರಹಗಳಿಗೆ ಶ್ರೀಗುರುಗಳ

ವಂಶಜರ ಮನೆಗಳಲ್ಲಿ ಈಗಲೂ ಪೂಜಾದಿಗಳು ನಡೆಯುತ್ತಿವೆ.

ಶ್ರೀ ಕೃಷ್ಣಯೋಗಿಂದ್ರರಿಗೆ ಏಳು ಜನ ಶಿಷ್ಯರು ಇದ್ದರೆಂಬ ಪ್ರತೀತಿಯಿದ್ದು, ಇವರಲ್ಲಿ ಕೆಲವರ ಅಧಿಷ್ಠಾನಗಳು ಸನಿಹದಲ್ಲೇ ಇದೆ.

ಶ್ರೀಗುರುಗಳ ಸಮಾಧಿಯ ಎದುರಿನಲ್ಲಿ ಪುರಾತನವಾದ ೬೦ X ೬೦ ಅಡಿಗಳ ಸುಂದರವಾದ ಕಲ್ಯಾಣಿಯು ಇರುತ್ತದೆ. ಈ ಕಲ್ಯಾಣಿಯಲ್ಲಿ ಸಪ್ತ ಋಷಿಗಳು ಮತ್ತು ಗುರುಗಳು ತಮ್ಮ ಶಿಷ್ಯರನ್ನೊಡಗೂಡಿ ನಿತ್ಯ ಸ್ನಾನ, ಧಾರ್ಮಿಕ ವಿಧಿಗಳನ್ನು ಮಾಡುತ್ತಾರೆಂಬ ಪ್ರತೀತಿಯು ತುಂಬಾ ಹಿಂದಿನಿಂದಲೂ ಭಕ್ತಾದಿಗಳಲ್ಲಿ ಅನುಭವ ವೇದ್ಯವಾಗಿರುತ್ತದೆ. ಇಂದಿಗೂ ಸಹ ಕಲ್ಯಾಣಿಯಲ್ಲಿ ಅನುಷ್ಠಾನ ತತ್ಪರರಾಗಿ ಧ್ಯಾನಲೀನರಾಗುವ ಗುರುಗಳನ್ನು, ಬಿಳಿಯ ಕುದುರೆಯನ್ನೇರಿ ಬರುವ ಸಿದ್ಧಪುರುಷರು ಸೇವಿಸುತ್ತಿರುತ್ತಾರೆ ಎಂದು ಗುರುನಾಥರು ಅನೇಕಬಾರಿ ತಿಳಿಸಿದ್ದರು.

ಸಂಸಾರದ ಸಂಬಂಧವು "ಮಾರ್ಗಮಧ್ಯದ ಪ್ರಯಾಣಿಕರ ಸಮಾಗಮದಂತೆ ತಾತ್ಕಾಲಿಕವಾದದ್ದು" – **"ಭವಸಂಗಃ ಖಲು ಪಾಂಥಸಂಗಮಃ"** ಎಂಬುದನ್ನರಿತಿದ್ದ ಶ್ರೀ ಕೃಷ್ಣಯೋಗೀಂದ್ರರು, ಸುಕೃತವಶಾತ್ ಲಭಿಸಿದ ತುರೀಯಾಶ್ರಮವನ್ನು ವಿಧಿವತ್ತಾಗಿ ಪಡೆದು ಪರಮಹಂಸರಾಗಿ ಜೀವನ್ಮುಕ್ತರಾಗಿ ಧ್ರುವನಂತೆ ಬೆಳಗಿದರಷ್ಟೇ. ಪಂಡಿತ ಪಾಮರರೆನ್ನದೆ ಸರ್ವಲೋಕ ಹಿತೈಷಿಗಳಾಗಿ ಯಳ್ಳಂಬಳಸೆಯಿಂದ ಬಾಣಾವರಕ್ಕೆ ತಮ್ಮ ತಾಯಿಯವರೊಂದಿಗೆ ಬಂದು ನೆಲೆನಿಂತರಷ್ಟೇ. ನಿರಂತರ ಆತ್ಮಾನುಸಂಧಾನದಿಂದ ಮನಸ್ಸು ಒಂದು ಭದ್ರನೆಲೆಯಲ್ಲಿ ನಿಂತು ವಿಶ್ರಾಂತಿ ಹೊಂದಿತು. ಮನುಷ್ಯತ್ವ–ಮುಮುಕ್ಷತ್ವ ಮತ್ತು ಮಹಾಜನರ

ಸಮಾಗಮದಿಂದ ಹಾಗೂ ಈಶ್ವರಾನುಗ್ರಹ–ಗುರುದೇವತಾಪ್ರಸಾದ ಹಾಗೂ ತಲಸ್ಪರ್ಶಿಯಾದ ಅನುಭವೈಕವೇದ್ಯ ಶಾಸ್ತ್ರಜ್ಞಾನದಿಂದ ಅವಿದ್ಯೆಯಿಂದುಂಟಾದ ಬಂಧನವನ್ನು ಕಳಚಿಕೊಂಡರು. ಗುರುವರ ಕರುಣಾಕಟಾಕ್ಷದಿಂದ ತಮ್ಮ ಪ್ರಾಕೃತಭಾವವನ್ನು ಹಾವಿನ ಪೊರೆಯಂತೆ ಕಳಚಿಕೊಂಡರು. ತಮ್ಮ ದೇಶವಾಸಿಗಳ, ಲೌಕಿಕರ ಪ್ರಾರ್ಥನೆಯನ್ನು ಮನ್ನಿಸಿ ಯೋಗಕ್ಷೇಮ ಪ್ರದಾತೃಗಳಾದರು. ಕೇವಲ ಮೋಕ್ಷೈಕಪ್ರಾರ್ಥಿ ಜಿಜ್ಞಾಸುವಿಗೆ, ಬ್ರಹ್ಮಸೂತ್ರಾದಿ ಗ್ರಂಥಗಳ ಉಪದೇಶದ್ವಾರ ಹೃದಯ ಗ್ರಂಥಿಯನ್ನು ಬಿಡಿಸುತ್ತಿದ್ದರು. ಶ್ರೀಗುರುವಿನ ವರಕರುಣೆಯೆಂಬ ಸೂರ್ಯಕಿರಣಗಳಿಂದ ಒಳಗಿನ ಕತ್ತಲನ್ನು ಹೋಗಲಾಡಿಸಿದರು, ತಾವೂ ಆನಂದಸಾಗರದಲ್ಲಿ ನಲಿದಾಡಿದರು.

**“ತ್ವಮಹಮಭಿಮಾನಹೀನೋ ಮೋದಿತ ನಾನಾಜನಾಚಾರಃ**
**ವಿಹರತಿ ಬಾಲವದೇಕೋ ವಿಮಲ–ಸುಖಾಂಭೋನಿಧೌ ಮಗ್ನಃ ॥”**

**ಪುನರಾಲೋಕನ**

ಮಹಾಯೋಗಿಗಳೂ ವಿರಕ್ತಶಿಖಾಮಣಿಗಳು ಆದ ಶ್ರೀ ಕೃಷ್ಣಯೋಗೀಂದ್ರ ಸರಸ್ವತೀ ಪರಮಹಂಸರ ಜನ್ಮೋತ್ಸವವನ್ನು ಜ್ಯೇಷ್ಠ ಬಹುಳ ಬಿದಿಗೆಯಲ್ಲಿ ಹಾಗೂ ಕಾರ್ತಿಕ ಶುದ್ಧ ದ್ವಾದಶಿಯ (ಉತ್ಥಾನದ್ವಾದಶೀ) ಆರಾಧನಾ ಮಹೋತ್ಸವಗಳು ಶ್ರೀಗುರುನಾಥರ ಮಾರ್ಗದರ್ಶನದಲ್ಲಿ ಪ್ರತೀವರ್ಷ ಶಾಸ್ತ್ರೋಕ್ತ ರೀತಿಯಲ್ಲಿ ನೆರವೇರುತ್ತಾ ಬಂದಿರುತ್ತದೆ. ಉಷಃ

ಕಾಲದಲ್ಲಿಯೇ, ಸ್ನಾನಾಹ್ನಿಕಜಪಾನುಷ್ಠಾನಗಳ ನಂತರ, ಗುರುಗಳ ಅಧಿಷ್ಠಾನಗಳು – ಸ್ಪರ್ಶಪಾದುಕೆಗಳು – ಜಗದ್ಗುರು ಶ್ರೀ ಶ್ರೀ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳ ವೇದಿಕೆ – ಶ್ರೀಗುರುನಾಥರ ವೇದಿಕೆ – ಕಲ್ಯಾಣೀ ಮುಂತಾದ ಪಾವನ ಸ್ಥಳಗಳಿಗೆ ಕಾಕಡಾರತಿ–ಭಜನೆ– ಗುರುಸೂಕ್ತ–ಅರುಣ ಪಾರಾಯಣ–ಆದಿತ್ಯ ಹೃದಯ, ಋಗ್ವೇದ– ಯಜುರ್ವೇದ ಸೂಕ್ತಗಳ ಪಾರಾಯಣ – ನಮಕ ಚಮಕ – ಪುರುಷಸೂಕ್ತ – ಶ್ರೀಸೂಕ್ತಗಳೊಂದಿಗೆ ಮೂಲಾಧಿಷ್ಠಾನಕ್ಕೆ ಅಭಿಷೇಕ, ಗಣಹೋಮ, ನವಗ್ರಹ ಪುರಸ್ಸರ ಶ್ರೀರುದ್ರ ಹೋಮ, ಧಾತ್ರೀಹವನ, ಮಂಗಳಾರತಿ– ಯತಿಗಳ ಆರಾಧನೆ, ತೀರ್ಥನಾರಾಯಣ ಪೂಜೆಗಳು, ಸಂಭ್ರಮದಿಂದ ಬರುವ ಭಕ್ತರಿಗೆ ತೀರ್ಥ ಪ್ರಸಾದ ವಿನಿಯೋಗ ಮೊದಲಾದ ಕಾರ್ಯಕ್ರಮಗಳಿಂದ ಸಂಪನ್ನವಾಗುತ್ತದೆ. ಯಾತ್ರಾರ್ಥಿಗಳಿಗೆ ಹಾಗೂ ಪಾರಾಯಣಕ್ಕೆ ಬರುವ ಗುರುಬಂಧುಗಳಿಗೆ ಉಳಿದು ಕೊಳ್ಳಲು ಸ್ಥಳ ಸೌಕರ್ಯ, ಸ್ನಾನಾನುಷ್ಠಾನಾದಿಗಳ ಸೌಕರ್ಯ, ಧ್ಯಾನಮಂದಿರ, ಉಪಾಹಾರದ ವ್ಯವಸ್ಥೆ ಮೊದಲಾದವುಗಳನ್ನು, ಜಯಂತಿ–ಆರಾಧನಾ ದಿನಗಳಂದು ಗುರುಬಂಧುಗಳ ಮೂಲಕ ಒದಗಿಸಲಾಗುತ್ತದೆ.

ಶ್ರೀಗುರುನಾಥರು, ಶ್ರೀ ಕೃಷ್ಣಯೋಗೀಂದ್ರರ ಅಧಿಷ್ಠಾನವೇ ತಾವು ಸಾಧನೆಯನ್ನು ಮಾಡಿದ ಕ್ಷೇತ್ರವೆಂದು ತಿಳಿಸಿದ್ದರು.

೧) ಸಂತ್ಯಜ್ಯ ಶಾಸ್ತ್ರಜಾಲಂ, ಸಂವ್ಯವಹಾರಂ ಸರ್ವತಃ ತ್ಯಕ್ತ್ವಾ,
ಆಶ್ರಿತ್ಯ ಪೂರ್ಣಪದವೀಂ, **ಆಸ್ತೇ ನಿಷ್ಕಂಪ ವದ್ಯೋಗೀ ॥**

೨) –– ನೋ ಜಾತಿರ್ ನೈವ ವರ್ಣೋ

ನಾಕಾರಂ, ನೋವಿಕಾರಂ, ನಾಸ್ತಿ ಪುಣ್ಯಂ ನ ಪಾಪಂ ...

ತತ್ತ್ವಮೇಕಂ ಸಹಜ ಸಮರಸಂ –––.

ಸದ್ಗುರುಂ ತಂ ನಮಾಮಿ

ಯಾವುದು ತಾನಾಗಿ ಪ್ರಾಪ್ತವಾಯಿತೋ ಅದರಿಂದ ತೃಪ್ತಿಪಟ್ಟರು, ಸಿಕ್ಕದೇ ಇರುವುದನ್ನು ಎಂದಿಗೂ ಬಯಸಲಿಲ್ಲ. ತಮ್ಮ ಗುರುಗಳ ಕರುಣಾಕಟಾಕ್ಷದಿಂದಲೇ ತನ್ನದೇ ಆದ ಆನಂದವನ್ನು ಅನುಭವಿಸಿದರು. ಸರ್ವ ವ್ಯವಹಾರವೂ ಅಡಕವಾಗಿರುವ ಚೈತನ್ಯದಲ್ಲಿ ತಮ್ಮ ಮನಸ್ಸನ್ನು ಲಯಮಾಡಿಕೊಂಡರು. ವರ್ಣಾಶ್ರಮ ವ್ಯವಸ್ಥೆಯ ಮಾರ್ಗದಲ್ಲಿ ಸಾಗಿಬಂದರೂ ಅದನ್ನೂ ದಾಟಿ, ವಿಧಿ–ನಿಷೇಧ ಕರ್ಮಜಾಲವನ್ನು ಪೂರೈಸಿ ದೇಹಬಂಧ ಸಡಿಲಿಸಿದರು. ಕೇವಲ ಅರಿವಿನ ರೂಪದಲ್ಲಿ, ಆನಂದ ರೂಪದಲ್ಲಿ ಉಳಿದರು. ಏಕೆಂದರೆ ವರ್ಣಾಶ್ರಮ ಕಟ್ಟಲೆಗಳಾಗಲಿ, ಅದನ್ನಾಶ್ರಯಿಸಿರುವ ವಿಧಿ–ನಿಷೇಧ ರೂಪ ಕರ್ಮಗಳಾಗಲಿ "ನಾನು ಬ್ರಹ್ಮನೇ" ಎಂಬ ಜ್ಞಾನವಾದ ಬಳಿಕ ಇರುವುದಿಲ್ಲ.

**"ಪ್ರವಿಗಲಿತ ದೇಹಬನ್ಧಃ, ಪ್ರಾಜ್ಞೋ ಬ್ರಹ್ಮೈವ ಕೇವಲಂ ಭವತಿ"**

ಎಲ್ಲಾ ಅಪರಾಧಗಳನ್ನು ಸಹಿಸಿ ಕ್ಷಮಿಸುವ ಅಂಥಹ ಸಿದ್ಧವರರಾದ ಶ್ರೀ ಶ್ರೀ ಶ್ರೀ ಕೃಷ್ಣಯೋಗೀಂದ್ರ ಸರಸ್ವತೀ ಪರಮಹಂಸರಿಗೆ ಮತ್ತೆ ಮತ್ತೆ ನಮಸ್ಕಾರಗಳು

**“ಸಹಮಾನಾಯ ಸಹಸ್ರಾಣ್ಯಪರಾಧಾನ್ ಪ್ರಣಮ್ರಜನರಚಿತಾನ್ ।**

**ಸಹಸೈವ ಮೋಕ್ಷದಾತ್ರೇ ಪ್ರಣತಿಂ ಕುರ್ಮಃ**

**ಶ್ರೀ ಕೃಷ್ಣಯೋಗೀಂದ್ರಾಯ ॥**

**ಇತಿ ಶಿವಮ್**

**ಜೀವನದ ಸಾರ್ಥಕತೆ**

ಅಂತಹ ಜ್ಞಾನ-ವೈರಾಗ್ಯಸಂಪನ್ನನು ಎಲ್ಲಿರುವನೋ, ಆ ದೇಶವು ಪವಿತ್ರವಾಗುವುದು. ಅಲ್ಲಿನ ಜನಗಳು ಪವಿತ್ರರಾಗುವರು. ಆತನ ಕಟಾಕ್ಷ, ಆತನೊಡನಾಟ ಪರಮ ಶ್ರೇಯಸ್ಸನ್ನೇ ಉಂಟುಮಾಡುತ್ತವೆ.

**ದೇಶಃ ಪೂತೋ ಜನಾಃ ಪೂತಾಃ ತಾದೃಶೋ ಯತ್ರ ತಿಷ್ಠಂತಿ ।**

**ತತ್ ಕಟಾಕ್ಷೋಽಥ ಸಂಸರ್ಗಃ ಪರಸ್ಮೈ ಶ್ರೇಯಸೇಽಪ್ಯಲಮ್ ॥**

***** ----- *****

ಯದ್ಯಪಿ ನಮ್ಮ ಗುರುಚರಣರ (ಗುರುನಾಥರ) ಚರಣಪದ್ಮಗಳ ಸೇವಾವಕಾಶವು ಕಿಂಚಿತ್ ಲಬ್ಧವಾಗಿ, ಅವರು ಅನುಗ್ರಹಿಸಿದ ಸಂಕ್ಷಿಪ್ತ ಟಿಪ್ಪಣಿಯನ್ನು ಆಧರಿಸಿ ಪೂರ್ವಸೂರಿಗಳ ಸಾಹಿತ್ಯೇತಿಹಾಸವನ್ನು ಯಥಾಮತಿ ಆಲೋಚನೆ ಮಾಡಿ ಈ ನಾಮಾವಳಿಯನ್ನು ಸಮರ್ಪಿಸಲಾಗಿದೆ. ಆ ಕಾರಣ ವಾಚಕವರೇಣ್ಯರು, ಗುರುಭಕ್ತಿಪ್ರಚೋದಕ ಗುಣ ಮಾಹಾತ್ಮ್ಯಗಳ ಪರಿಶೀಲನೆಯಲ್ಲಿ ಆಸಕ್ತರಾಗಲಿ ಎಂದು ಪ್ರಾರ್ಥಿಸುತ್ತೇವೆ.

# ಶ್ರೀ ಕೃಷ್ಣಯೋಗೀಂದ್ರ ಸರಸ್ವತೀ ಅಷ್ಟೋತ್ತರ ದಿವ್ಯ ಶತನಾಮಾವಳಿಃ

ಅರುಣಚರಣಪದ್ಮಂ ಪಂಡಿತೈಃ ಸೇವ್ಯಮಾನಮ್ ।
ನರಹರಿಗುರುರೂಪಂ ನಿತ್ಯವಿಜ್ಞಾನವೇದ್ಯಮ್ ।
ಅಮರಗಿರಿನಿವಾಸಶ್ರೀನಿವಾಸಪ್ರಸಾದಾತ್ ।
ಪ್ರಕಟಿತನಿಜಚಿತ್ತಂ ಶ್ರೀಕೃಷ್ಣಯೋಗೀಂದ್ರಮೀಡೇ ॥

ಓಂ ಓಂಕಾರ-ಪದ್ಮ-ಭೃಂಗಾಯ ನಮಃ
ಪ್ರಣವಪ್ರತಿಪಾದ್ಯತನವೇ ನಮಃ
ಆತ್ಮವಿದಗ್ರಜನ್ಮಭವನೇ ಸಂಪ್ರಾಪ್ತ ಜನ್ಮನೇ ನಮಃ
ಯಲ್ಲಂಬಳಸೇಕ್ಷೇತ್ರ-ನಿವಸದ್-ಆರ್ಯಾಂಬಾಗರ್ಭ-
ಸಂಶ್ರಿತಾಯ ನಮಃ
ಜ್ಯೇಷ್ಠ ಕೃಷ್ಣದ್ವಿತೀಯಾಯಾಂ ಸಮುದ್ಭವಾಯ ನಮಃ
ಮಾತಾ-ಪಿತೃಭ್ಯಾಂ ಪರಮಂ ತಪ್ತ್ವಾ-
ತಪೋಲಬ್ಧಾಯ ನಮಃ
ಹರಿಪ್ರಸಾದಾಲ್ಲಬ್ಧ ನರಹರಿಗುರುರೂಪಾಯ ನಮಃ
ವಾಸಿಷ್ಠೋಪಮನ್ಯುಗೋತ್ರಚೂಡಾಮಣಯೇ ನಮಃ
ಋಕ್-ಶಾಖಾಧ್ಯಾಯಿನೇ ನಮಃ
ಶ್ರೀಯಲ್ಲಂಬಳಸೇಽಗ್ರಹಾರಾಖ್ಯ ಜನ್ಮಸ್ಥಾನಾಯ ನಮಃ ॥೧೦॥

ಅನೇಕಜನ್ಮಾರ್ಜಿತಾಗಣ್ಯ–ಪುಣ್ಯಲಭ್ಯಾಯ ನಮಃ

ಸಾಕ್ಷಾಚ್ಛಂಕರಮೂರ್ತಯೇ ನಮಃ

ಸಂಪ್ರಾಪ್ತೇ ಸಪ್ತದಶೇ(ವರ್ಷೇ), ಶ್ರುತಿ–ಸ್ಮೃತಿ–ಪುರಾಣಾದಿಷು–

ಪ್ರಾಪ್ತ–ವೈದುಷ್ಯಾಯ ನಮಃ

ದ್ವಾದಶವರ್ಷಾತ್ಮಕ ಅನುಷ್ಠಿತಗಾಯತ್ರೀ–

ಪುರಶ್ಚರಣಾಯ ನಮಃ

ಜಗದ್ಗುರುಶ್ರೀಕೃಷ್ಣಾಂಶಾವತಾರಕಾಯ ನಮಃ

'ಸದ್ಗಾರ್ಹಸ್ಥ್ಯಾತ್ಸುಸಂನ್ಯಾಸ' ಇತಿ–

ಸ್ಮೃತ್ಯುಕ್ತಿ–ದರ್ಶಕಾಯ ನಮಃ

ಸ್ವೀಕೃತ–ಪಾರಿವ್ರಾಜ್ಯ ಸಮುಜ್ವಲಾಯ ನಮಃ

ಶ್ರೀಕೃಷ್ಣಯೋಗೀಂದ್ರ (ಸರಸ್ವತೀ ಪರಮಹಂಸ)–

ಇತ್ಯಾಖ್ಯ ಯೋಗಪಟ್ಟವಿರಾಜಿತಾಯ ನಮಃ

ಸಂಪ್ರಾಪ್ತ ಪಾದುಕಾಸಿದ್ಧಯೇ ನಮಃ

ಯತಿಧರ್ಮಪರಾಯಣಾಯ ನಮಃ ॥೨೦॥

ಧೃತದಂಡ–ಕುಂಡಾಯ ನಮಃ

ಕರಾಗ್ರವಿಲಸನ್ಮಾಲಾಯ ನಮಃ

ರುದ್ರಾಕ್ಷ–ಭೂಷಿತಗ್ರೀವಾಯ ನಮಃ

ತುಲಸೀದಾಮ ಶೋಭಾಢ್ಯಾಯ ನಮಃ

ಜ್ಞಾನದರ್ಪಣಗೋಚರಾಯ ನಮಃ

ಬಾಲಾರುಣಾಭ–ವಸನಾಯ ನಮಃ

ದ್ವಿಪಂಚಾಶದ್ ವರ್ಷಪರ್ಯಂತಂ ಸಂಚಾರೇಣ–

ಪಾವಿತ ಧರಣಯೇ ನಮಃ

ಭಗವತ್‌ಪೂಜಾತ್ಮಕ–ಕರ್ಮಜನ್ಯ–ಫಲಾಪರೋಕ್ಷ–

ಜ್ಞಾನಾಯ ನಮಃ

ಕೃತಸ್ವಾನುಭವಸಿದ್ಧಾಲೌಕಿಕ–ಸಾಧನಾಫಲ–

ಲೋಕಾರ್ಪಣಾಯ ನಮಃ

ಸ್ವಸಾನ್ನಿಧ್ಯೇನಾಶ್ವಾಸಿತಾಂಬಕಾಯ ನಮಃ ॥೩೦॥

ವೃದ್ಧಮಾತ್ರಾ ಸಹ ಸ್ವೀಕೃತಬಾಣಾವರ–ವಾಸಾಯ ನಮಃ

ಮಾತೃಸೇವಾಪರಾಯಣಾಯ ನಮಃ

ಗಂಗಾದರ್ಶನೈಕ–ಸಂಪ್ರಾರ್ಥಿತಮಾತೃವಾಂಛಾನು–

ಪಾಲಕಾಯ ನಮಃ

ಪ್ರಸಾದಿತ–ದೇವಾಗಾರ–ಗಂಗಾಕರಂಡಕಾಯ ನಮಃ

ಭಾಗೀರಥೀದರ್ಶನ–ಸಮುತ್ಪನ್ನ–ಜನನೀಪ್ರೀತಿ–

ಭಾಜನಾಯ ನಮಃ

ಗಂಗಾಕರಂಡಕೋದ್ಭೂತಭಾಗೀರಥ್ಯಾ–

ತೋಷಿತಾಂಬಾದ್ಭುತ–ಮನೋರಥಾಯ ನಮಃ

ಮಾತ್ರೇಽನುಗೃಹೀತ–ದಿವ್ಯಚಕ್ಷುಷೇ ನಮಃ

ದೃಷ್ಟಕಾಶೀ ವಿಶ್ವನಾಥ ಪ್ರಸಾದಾನಂದಿತ–

ಮಾತೃಕಾಯ ನಮಃ

ಮಾತೃಭಕ್ತಿ–ಮಾಹಾತ್ಮ್ಯ–ನಿದರ್ಶನ–

ಪರಾಯಣಾಯ ನಮಃ

ಮಾತೃಸೇವಾಖ್ಯ–ನಿಕಷಗ್ರಾವ–ಪೂತಮಾನಸಾಯ ನಮಃ ॥೪೦॥

ಮೋಕ್ಷೈಕ ಪ್ರಾರ್ಥಿ–ಮಾತೃಹೃದ್‌ಗ್ರಂಥಿ–ಭಿಂದತೇ ನಮಃ

ತಾರಕಬ್ರಹ್ಮಕಥನ–ಕೃತಾರ್ಥಿತ ಮಾತೃಕಾಯ ನಮಃ

ಮಾಲೇಕಲ್ಲು ಸ್ವೇಷ್ಟದೇವತಾ–ಶ್ರೀದೇವೀ–ಭೂದೇವೀ–

ಸಮೇತ ಶ್ರೀವೇಂಕಟೇಶ್ವರ ಪ್ರಪೂಜಕಾಯ ನಮಃ

ಸುಮವರ್ಯೈಃ ಧೂಪದೀಪೈಶ್ಚ–ಸಿದ್ಧಗಣೈಃ ರಾತ್ರೌ–

ಸಂಪೂಜ್ಯಮಾನಾಯ ನಮಃ

ನೈಕಕಾಲಾರ್ಚಿತ–ದರ್ಶಿತದೇವಮೂರ್ತಿ–ವಿಸ್ಮಾಪಿತ–

ಮಹಾಜನಾಯ ನಮಃ

ಶಿಷ್ಯಸಪ್ತಕ–ಸಮಾಶ್ರಯಾಯ ನಮಃ

ಶ್ರೀನಾರಾಯಣಮಸ್ಕರೀಂದ್ರಾರ್ಚಿತಾಂಘ್ರಿಕಾಯ ನಮಃ

ಬಾಣಾವರಸುಕ್ಷೇತ್ರ–ಸಾನ್ನಿಧ್ಯಾಕಾಂಕ್ಷಿಣೇ ನಮಃ

ಶ್ರೀಬಾಣಾವರ–ಧರಣಿಭೂಷಣಭೂತ–ಜನ್ಮನೇ ನಮಃ

ಅವಧೂತವರ–ಕರಾರ್ಚಿತ–ಕಮಲಾಂಘ್ರಿಯುಗಾಯ ನಮಃ ॥೫೦॥

ವೇದಶಾಸ್ತ್ರಸಂಪ್ರದಾಯಪಾಲನ–ಧೃತವ್ರತಾಯ ನಮಃ

ಹೇಮಾಶ್ಮ–ಸಾಮ್ಯಮತಯೇ ನಮಃ

ತುಲಸ್ಯಾಧಾರಿತ ಶಿಲಾನ್ಯಾಸೇನ ರಚಿತ–

ಸೋಪಾನ ಪರಂಪರಾಯ ನಮಃ

ನೈಕರೂಪಧರಾಯ ನಮಃ

(ಭಾರತ) ಯಾತ್ರಾರ್ಥಗಮನೋತ್ಸುಕಾಯ ನಮಃ

ಕರ್ಣಾಟಕಾವನಿ–ಭಾಗ್ಯೋದ್ಯದ್–

ಜ್ಞಾನಾರ್ಹಮಣಯೇ ನಮಃ

ಶಾಂತ್ಯೈಷಣಾತ್ರಯಾಯ ನಮಃ

ಅಣಿಮಾದ್ಯಷ್ಟಸಿದ್ಧಿ–ಸಂಸೇವಿತಾಯ ನಮಃ

ರಾಧಾಮಾಧವ ಸಂವಾದ ರಸಿಕಾಯ ನಮಃ

ವಿದಿತ ಸರ್ವಶಾಸ್ತ್ರಗ್ರಂಥಜಾಲಾಯ ನಮಃ ॥೬೦॥

ವಿಪ್ರ–ಗೋ–ಗಜ–ಚಂಡಾಲ–ಸಮದೃಷ್ಟಯೇ ನಮಃ

ಅಶರಣಶರಣದಾಯ ನಮಃ

ಜನನಮರಣಭಯಹಾರಿಣೇ ನಮಃ

ಪರಮಾತ್ಮಾನುಸಂಧಾನ–ನಿರ್ಗತಾಶೇಷ–

ಚಿಂತನಾಯ ನಮಃ

ಶ್ರದ್ಧಾಭಕ್ತಿಧ್ಯಾನಯೋಗಾದಧಿಗತಾತ್ಮವಿದ್ಯಾಯ ನಮಃ

ಭೋಗ–ಭೋಕ್ತೃ–ಭೋಜ್ಯ–ವಿಲಕ್ಷಣ–ಸಾಕ್ಷಿಣೇ ನಮಃ

ತಪ್ತಾತ್ಮನಾಂ ದಯಾಚ್ಛಾಯಾ–ತರವೇ ನಮಃ

ಮುಮುಕ್ಷೂಣಾಂ ಕಾಮಧೇನವೇ ನಮಃ

ಯತಿ–ತತಿ–ಪೂಜಿತಪಾದಾಯ ನಮಃ

ತ್ರಿಪುಂಡ್ರವಿಲಸತ್ಫಾಲಾಯ ನಮಃ ॥೭೦॥

ಶ್ರೀಪಾದುಕಾಶೇಷ ವೈಭವಾಯ ನಮಃ

ಪ್ರಥಿತ 'ಅಯ್ಯಾಖ್ಯ' ಸಂಜ್ಞಕಾಯ ನಮಃ

ಶ್ರೀ–ವಿದ್ಯಾ–ಕೀರ್ತಿ–ದಾನ–ಕಲ್ಪತರವೇ ನಮಃ

ಲಂಬಿಕಾಯೋಗಮಾರ್ಗನಿಷ್ಣಾತಾಯ ನಮಃ

ಸರ್ವಲೋಕರಕ್ಷಣವ್ರತಾಯ ನಮಃ

ಭವನೀಕೃತ–ಆನತಹೃದಯಾಯ ನಮಃ

ಭಕ್ತಜನ ಸಂಮೋಹಕರ–ಶ್ರೀಕೃಷ್ಣಯೋಗೀಂದ್ರಾನ್ವರ್ಥ–
ನಾಮಕಾಯ ನಮಃ

ತತ್ತ್ವಸಂವಿತ್ಪ್ರದಾನೇನ ಜನನ–ಮೃತಿ–ಹರಾಯ ನಮಃ

ಪೂತಾನುಪಮ–ಚರಿತ್ರಾಯ ನಮಃ

ಪಾಲಿತ–ನಿಜಭಕ್ತತತಯೇ ನಮಃ ॥೮೦॥

ಶೀಲಿತ–ವೇದಾಂತ–ಗೂಢತತ್ತ್ವಾಯ ನಮಃ

ಲಾಲಿತಭುವನ ತ್ರಯಾಯ ನಮಃ

ಸಂಪ್ರಾಪ್ತಾಖಿಲ–ಯೋಗಜಾಲ–ಜನಿತಾನಂದಾಯ ನಮಃ

ಸರ್ವದ್ವಂದ್ವವಿನಿರ್ಮುಕ್ತಾಯ ನಮಃ

ವಿದ್ವದ್ವೃಂದ ತಪಃಫಲಾಯ ನಮಃ

ಆನಮ್ರಲೋಕೇಷ್ಟದಾನ–ಪ್ರಚಂಡಾಯ ನಮಃ

ನಿರ್ವ್ಯಾಜಪೂರ್ಣ–ಕರುಣಾಮೃತ–ಜನ್ಮಭೂಮಯೇ ನಮಃ

ರಮಾಧವಾಂಘ್ರಿ–ಸ್ಥಿರಭಕ್ತಿದಾಯ ನಮಃ

ಅಶೇಷ ಕಲ್ಯಾಣ–ಗುಣಾಭಿರಾಮಾಯ ನಮಃ

ತಾಪತ್ರಯಾಹೀಂದ್ರ–ಖಗೇಶ್ವರಾಯ ನಮಃ ॥೯೦॥

ನವನೀತ–ತುಲ್ಯ–ಹೃದಯಾಯ ನಮಃ

ಸ್ಮೃತಿಮಾತ್ರ–ತುಷ್ಟಹೃದಯಾಯ ನಮಃ

ಗುರುವರಬೋಧಿತ–ಮಹಿಮಾಯ ನಮಃ

ತರುತಲನಿಕೇತನಾಯ ನಮಃ

ಯೋಗಿನಾಂ ಪ್ರವರಾಯ ನಮಃ

ಪಾದಧೂಲಿ–ಪರಿಪಾವಿತ–ಲೋಕಾಯ ನಮಃ

ಶ್ರಿತಕಲ್ಪತರವೇ ನಮಃ

ಅಗ್ರಾಹ್ಯ ನಿಜಸ್ವರೂಪಾಯ ನಮಃ

ಕೀನಾಶಭೀತಿಹರಣಾಯ ನಮಃ

ಸಜ್ಜನ–ಮಾನಸಾಬ್ಧಿ–ಸುಧಾಕರಾಯ ನಮಃ ॥೧೦೦॥

ದುರ್ಗಾಪತ್ತಿನಿವಾರಣೈಕ ಚತುರಾಯ ನಮಃ

ಶುದ್ಧಚೇತಸಾಂ ಸುಲಭಾಯ ನಮಃ

ದುಷ್ಟಚೇತಸಾಂ ದುರ್ಲಭಾಯ ನಮಃ

ಶಮ–ದಮ–ಮುಖ–ದಿವ್ಯರತ್ನ ವಾರಿಧಯೇ ನಮಃ

ಋಷಿಗಣಸೇವಿತ ಕಲ್ಯಾಣೀ ನಿರ್ಮಾತ್ರೇ ನಮಃ

ಮಾತೃದಿವ್ಯದೃಷ್ಟಿದಾಯ ನಮಃ

ವಸಂತವಲ್ಲೋಕಹಿತಂ ಚರತೇ ನಮಃ

ಭವರೋಗಭಿಷಕ್‌ಪತಯೇ ನಮಃ ॥೧೦೮॥

ಪ್ರಪನ್ನಾವನ–ಬದ್ಧದೀಕ್ಷಾಯ ನಮಃ

ಅಧಿಷ್ಠಾನಾಂತರ್ಗತ–ಸದಾತನ ಜ್ಯೋತಿಷೇ ನಮಃ

ಶ್ರಿತಸಜೀವಾಧಿಷ್ಠಾನಾಯ ನಮಃ

ಶ್ರೀಕೃಷ್ಣಯೋಗೇಶ್ವರ–ಪದಾಂಭೋಜ–ಚಂಚರೀಕ–

ಹೃದಂಬುಜಾಯ ನಮಃ ॥೧೧೨॥

ಸರ್ವಸೌಖ್ಯಮೂಲ–ಗುರುವರ–ಶ್ರೀಕೃಷ್ಣಯೋಗೀಂದ್ರಸರಸ್ವತೀ–

ಪರಮಹಂಸ ಚರಣಾಭ್ಯಾಂ ನಮಃ

॥ ಇತಿ ಶ್ರೀಸದ್ಗುರು ಪರಬ್ರಹ್ಮ ಶ್ರೀಕೃಷ್ಣಯೋಗೀಂದ್ರ ಸರಸ್ವತೀ ಪರಮಹಂಸ
ಅಷ್ಟೋತ್ತರ ದಿವ್ಯ ಶತನಾಮಾವಳಿಃ ॥

# ಮಂಗಳಮ್

ಹಂಸರಾಜಸ್ಸದಾಸ್ಮಾಕಂ ಮಾನಸೇ ರಮತಾಂ ಮುದಾ ।
ಯಥಾ ವಾ ಮಾನಸೇ ರಾಜಹಂಸಸ್ಸಂರಮತೇ ಮುದಾ ॥

ಹೇಗೆ ರಾಜಹಂಸವು ಮಾನಸ ಸರೋವರದಲ್ಲಿ ಆನಂದದಿಂದ ಕ್ರೀಡಿಸುವುದೋ, ಹಾಗೆಯೇ ಪರಮಹಂಸರಾದ (ಗುರುಗಳು) ನಮ್ಮ ಮನಸ್ಸಿನಲ್ಲಿ ಸದಾ ಸಂತೋಷದಿಂದ ನಲಿಯಲಿ)